ನಾನು ನಿಲುವಳಿ ಸೂಚನೆ ಮೂಲಕ ತಂದಿದ್ದೇನೆ, ಅದು ನಿಮ್ಮ ಮುಂದೆ ಪ್ರಸ್ತಾಪ ಮಾಡುತ್ತೇನೆ, ಆ ಮೇಲೆ ನೀವು ಏನು ನಿರ್ಣಯ ಮಾಡುತ್ತೀರಿ ಅದರಂತೆ ನಡೆದುಕೊಳ್ಳುತ್ತೇವೆ. ಮಾನ್ಯ ಈಶ್ವರಪ್ಪನವರು ಪದೇ ಪದೇ ಎದ್ದು ನಗೆಪಾಟಲಾಗಿ ಬಿಡುತ್ತೇವೆಂದು ಹೇಳುತ್ತಾರೆ. ಯಾರು ನಗೆಪಾಟಲಾಗಿದ್ದಾರೆಂದು ಈ ದೇಶಕ್ಕೆ ಗೊತ್ತಿಲ್ಲವೋ? ಯಾರು ನಗೆಪಾಟಲಾಗಿದ್ದಾರೆಂದು ಅದರ ಬಗ್ಗೆ ಚರ್ಚೆ ಮಾಡೋಣ. ನಾನಾ, ನಿಮ್ಮ ಸರ್ಕಾರವೇ ಅಥವಾ ನೀವೇ ಎಂಬ ಬಗ್ಗೆ ಚರ್ಚೆ ಮಾಡೋಣ. ವಿರೋಧ ಪಕ್ಷದವರು ನಗೆಪಾಟಲಾಗಿಬಿಡುತ್ತಾರೆ. ಏನು ವಿರೋಧ ಪಕ್ಷದವರು ಅಂತ ಶೌರ್ಯ ತೋರಿಸುತ್ತಾರೆ. ಶೌರ್ಯ ತೋರಿಸುವುದು ಅಲ್ಲ ಇದು. ಹಕ್ಕಿನ ಪ್ರತಿಪಾದನೆ. ಜನರ ಸಮಸ್ಯೆಗಳನ್ನು ಪ್ರಸ್ತಾಪ ಮಾಡುವುದು. ಇಲ್ಲಿ lung power exhibit ಮಾಡುವುದಕ್ಕೆ ಅಲ್ಲ ಬಂದಿರುವುದು. ಮಾನ್ಯ ಅಧ್ಯಕ್ಷರೆ, ನನಗೆ ಅವಕಾಶ ಕೊಟ್ಟಿದ್ದೀರಿ, ನಾನು ನಿಲುವಳಿ ಸೂಚನೆ ಬಗ್ಗೆ ಪ್ರಾಸ್ತಾವಿಕ ಪ್ರಸ್ತಾಪ ಮಾಡುತ್ತೇನೆ.

4. ನಿಯಮ 60ರ ಅಡಿಯಲ್ಲಿ ನಿಲುವಳಿ ಸೂಚನೆಯ ಮೇಲೆ ಚರ್ಚೆಗೆ ಅನುಮತಿ ಕೋರಿಕೆ

ವಿಷಯ ; ರಾಜ್ಯದಲ್ಲಿ ಉಂಟಾಗಿರುವಂತಹ ಗೊಬ್ಬರದ ಸಮಸ್ಯೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇವತ್ತು ಕರ್ನಾಟಕ ರಾಜ್ಯದಲ್ಲಿ ಗೊಬ್ಬರದ ಅಭಾವೆ ಇದೆ ಮಾನ್ಯ ಮುಖ್ಯಮಂತ್ರಿಗಳು ಶಿವಮೊಗ್ಗ ಜಿಲ್ಲೆಯಿಂದ ನಿನ್ನೆ ಒಂದು ಹೇಳಿಕೆ ಕೊಟ್ಟಿದ್ದಾರೆ. ಯೂರಿಯಾ ಕೊರತೆ ಇದೆ ಎಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೆ, ನಾಲ್ಕು ತರಹದ ಗೊಬ್ಬರಗಳನ್ನು ರೈತರು ವಿಶೇಷವಾಗಿ ಹೆಚ್ಚಿಗೆ ಬಳಸುತ್ತಾರೆ. ಒಂದು ಯೂರಿಯಾ, ಇನ್ನೊಂದು NPK ಮತ್ತು ಕಾಂಪೋಸ್ಟ್ ಗೊಬ್ಬರ ಹಾಗೂ ಕಾಂಪ್ಲೆಕ್ಸ್ ಗೊಬ್ಬರಗಳನ್ನು ಹೆಚ್ಚಾಗಿ ಬಳಸುತ್ತಾರೆ. ಬಿತ್ತನೆ ಆದ ಮೇಲೆ ರೈತರು ಯಾವಾಗಲೂ first phaseನಲ್ಲಿ ಯೂರಿಯಾ ಬಳಸುತ್ತಾರೆ. First phaseನಲ್ಲಿ ಪೈರುಗಳಿಗೆ ಕೊಡತಕ್ಕಂತಹ ಗೊಬ್ಬರ ಯೂರಿಯ. ಅದು ಇವತ್ತು ರೈತರಿಗೆ ಎಲ್ಲಾ ಕಡೆ ಸಿಗಬೇಕು. ಇವತ್ತು ಇಡೀ ರಾಜ್ಯದಲ್ಲಿ ಬಿತ್ತನೆಗೆ ಮುಂಗಾರಿನಲ್ಲಿ ಸುಮಾರು 70 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ನಾವು ಮುಂಗಾರು ಬಿತ್ತನೆ ಮಾಡುತ್ತೇವೆಂದು ಕೃಷಿ ಇಲಾಖೆಯವರು ಅಂದಾಜು ಮಾಡಿ ಕೊಟ್ಟಿದ್ದಾರೆ. ಯಾವ ಯಾವ ಬೆಳೆಯನ್ನು ಮುಂಗಾರಿನಲ್ಲಿ ಹಾಕುತ್ತೇವೆಂದು ಕೂಡ ಕೃಷಿ ಇಲಾಖೆಯವರಿಗೆ ಗೊತ್ತು. ಯಾವ ಯಾವ ಸಂದರ್ಭದಲದಲ್ಲಿ, ಯಾವ ಯಾವ ಕಾಲಕ್ಕೆ, ಯಾವ ಯಾವ ಗೊಬ್ಬರ ರೈತರು ಬಳಸುತ್ತಾರೆ ಎನ್ನತಕ್ಕಂತಥದ್ದು ಕೂಡ ಕೃಷಿ ಇಲಾಖೆಯವರಿಗೆ ಗೊತ್ತಿದೆ. ಈಗಾಗಲೇ ಮಳೆ ಬೀಳುವುದು ಸ್ವಲ್ಪ ವಿಳಂಬವಾಗಿದೆ. ಕೆಲವು ಜಿಲ್ಲೆಗಳಲ್ಲಿ ಮಳೆ

ಬಿದ್ದಿದೆ, ಇನ್ನು ಕೆಲವು ಜಿಲ್ಲೆಗಳಲ್ಲಿ ಮಳೆ ಬಿದ್ದಿಲ್ಲ, ಯಾವ ಕೃಷಿ ಸಚಿವರೇ ಹೇಳಿದ್ದಾರೆ, ಸುಮಾರು 244 ಹೋಬಳಿಗಳಲ್ಲಿ ಮಳೆ ಬಿದ್ದಿಲ್ಲ. ಇಡೀ ರಾಜ್ಯದಲ್ಲಿ ಸುಮಾರು 40% ಬಿತ್ತನೆ ಆಗಿರಬಹುದು. ಅದಕ್ಕಿಂತ ಹೆಚ್ಚಿಗೆ ಆಗಿಲ್ಲ. ಇವತ್ತಿನವರೆಗೆ ಯೂರಿಯ ಗೊಬ್ಬರ ನಮಗೆ ಸಾಕಷ್ಟು ಬಂದಿದೆ, ಯೂರಿಯ ಗೊಬ್ಬರದ ಕೊರತೆ ಇಲ್ಲವೆಂದು ಮಾನ್ಯ ಕೃಷಿ ಸಚಿವರು ಹೇಳಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಕೇಂದ್ರದ ಕಡೆ ಕೈ ಮಾಡಿ ಇವತ್ತು ಏನಾದರೂ ಗೊಬ್ಬರದ ಕೊರತೆ ಆಗಿದ್ದರೆ ಕೇಂದ್ರ ಸರ್ಕಾರ ಕಾರಣ, ಅವರು ಗೊಬ್ಬರ ಕೊಟ್ಟಿಲ್ಲ, ಅವರು ಗೊಬ್ಬರ ಕೊಡದೇ ಇರುವುದರಿಂದ ನಮಗೆ ಇವತ್ತು ಅಭಾವವಾಗಿದೆ ಎನ್ನತಕ್ಕಂತಹ ಮಾತನ್ನು ಹೇಳಿದ್ದಾರೆ. ನನಗೆ ಇರತಕ್ಕಂತಹ ಮಾಹಿತಿ ಪ್ರಕಾರ ಜೂನ್ ಅಂತ್ಯದವರೆಗೆ ಸುಮಾರು 1,77,000 ಟನ್ ಯೂರಿಯಾ ಬಂದಿದೆ. ಜುಲೈನಲ್ಲಿ ಸುಮಾರು 36,000 ಮೆಟ್ರಿಕ್‌ಟನ್ ಯೂರಿಯಾ ಬಂದಿದೆ. ಇವರು ನಮಗೆ ಖಾರಿಫ್ ಬೆಳೆಗೆ ಗೊಬ್ಬರ ಇಷ್ಟು ಬೇಕೆಂದು ಡಿಮ್ಯಾಂಡ್ ಕಳುಹಿಸಿರತಕ್ಕಂಥದ್ದು 8 ಲಕ್ಷ ಟನ್ ಯೂರಿಯಾ ಬೇಕೆಂದು ಕೇಳಿದ್ದಾರೆ. ಕೇಂದ್ರ ಸರ್ಕಾರ ಸುಮಾರು 4 ಲಕ್ಷ ಮೆಟ್ರಿಕ್‌ಟನ್ ಅಲಾಟ್ ಮಾಡಿದೆ. ಕೇಂದ್ರ ಸರ್ಕಾರ ಅಲಾಟ್ ಮಾಡಿದರೂ ಕೂಡ, 2,12,000 ಟನ್ ಯೂರಿಯಾ ಬಂದಿದ್ದರೂ ಕೂಡ, ನೀವು ರೈತರಿಗೆ ಸರಿಯಾಗಿ ಗೊಬ್ಬರ ವಿತರಣೆ ಮಾಡುವುದಕ್ಕೆ ಆಗದೆ, ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಕಳೆದ ಬಾರಿ ಇದೇ ಕಾರಣಕೋಸ್ಕರ ಹಾವೇರಿಯಲ್ಲಿ ಗೋಲಿಬಾರ್ ಆಗಿದೆ, ಇನ್ನೂ ಕೂಡ ಅದು ಮಾಸಿಲ್ಲ. ಅದು ಮಾಸದೇ ಇರತಕ್ಕಂತಹ ಸಂದರ್ಭದಲ್ಲಿ ಮತ್ತೆ ಅದೇ ಜಿಲ್ಲೆಯಲ್ಲಿ ಗೊಬ್ಬರದ ಕೊರತೆ ಆಗಿದೆ. ಗುತ್ತಲ್ ನಲ್ಲಿ ರೈತ ಚಳುವಳಿ ಮಾಡಿದ್ದಾರೆ, ರಾಣಿಬೆನ್ನೂರಿನಲ್ಲಿ ಚಳುವಳಿ ಮಾಡಿದ್ದಾರೆ, ಮಾನ್ಯ ಕೃಷಿ ಸಚಿವರ ಜಿಲ್ಲೆ ಆದ ಹರಿಹರದಲ್ಲಿ ರೈತರು ಚಳುವಳಿ ಮಾಡಿದ್ದಾರೆ, ಶಿವಮೊಗ್ಗ ಜಿಲ್ಲೆಯಲ್ಲಿ ಚಳುವಳಿ ಮಾಡಿದ್ದಾರೆ, ಅನೇಕ ಜಿಲ್ಲೆಗಳಲ್ಲಿ ರೈತರು ನಮಗೆ ಯೂರಿಯಾ ಸಿಕ್ಕಿಲ್ಲವೆಂದು ಚಳುವಳಿ ಮಾಡುತ್ತಿದ್ದಾರೆ. ಇದು ರೈತರಿಗೆ ಯೂರಿಯಾ ಹಾಕಲಿಕ್ಕೆ ಸಕಾಲ. ಎಲ್ಲಿ ಬಿತ್ತನೆ ಮಾಡಿ ಬೆಳೆ ಬಂದಿರುತ್ತದೆ ಅದಕ್ಕೆ ಗೊಬ್ಬರ ಹಾಕುವುದಕ್ಕೆ ಸಕಾಲ. ಯೂರಿಯಾ ಹಾಕಬೇಕಾದರೆ ಈ ಸಕಾಲದಲ್ಲಿ ಸರ್ಕಾರ ಮತ್ತು ಕೃಷಿ ಇಲಾಖೆ ರೈತರಿಗೆ ಎಷ್ಟು ಬೇಕು ಅಷ್ಟು ಯೂರಿಯಾವನ್ನು ಸ್ಟಾಕ್ ಮಾಡಿ ಅದನ್ನು ವಿತರಣೆ ಮಾಡಬೇಕಾದುದು ಸರ್ಕಾರದ ಜವಾಬ್ದಾರಿ. ಬಂದಿರತಕ್ಕಂತಹ ಗೊಬ್ಬರ ಕೂಡ ನೀವು ಸರಿಯಾಗಿ ಹಂಚುವುದಕ್ಕೆ ಆಗದೇ, ಇವತ್ತು ರೈತರು ಪ್ರತಿಭಟನೆ ಮಾಡುತ್ತಿದ್ದರೆ, ಚಳುವಳಿ ಮಾಡಿತ್ತಿದ್ದರೆ, ನೀವು ಸರಿಯಾಗಿ ವಿತರಣೆ ಮಾಡದೇ ಇರುವುದನ್ನು ವಿಫಲತೆ ಎಂದು ಕರೆಯದೇ ಮತ್ತೇನೆಂದು ಕರೆಯುತ್ತಾರೆ? Successful government ಎಂದು ಕರೆಯಬೇಕಾ? You are successful ಎಂದರೆ ರೈತರು ಏಕೆ ಗೊಬ್ಬರ ಇಲ್ಲವೆಂದು ಚಳುವಳಿ ಮಾಡುತ್ತಿದ್ದರು? ಗೊಬ್ಬರ ಕೊಟ್ಟಿದ್ದರೆ ಸುಮ್ಮನೆ ಚಳುವಳಿ ಮಾಡುತ್ತಾರಾ? ಗೊಬ್ಬರ ಕೊಡುವುದಕ್ಕೆ

ಆಗಲಿಲ್ಲವೆಂದು ಚಳುವಳಿ ಮಾಡುತ್ತಿದ್ದಾರೆ. ಇದು ಇವತ್ತು ಪ್ರಶ್ನೆ ಇರತಕ್ಕಂಥದ್ದು. ಕೇಂದ್ರ ಸರ್ಕಾರ ಇದಕ್ಕೆ ಜವಾಬ್ದಾರಿ, ಕೇಂದ್ರ ಸರ್ಕಾರದಿಂದ ಇನ್ನೂ ಗೊಬ್ಬರ ಬಂದಿಲ್ಲ, ಕೇಂದ್ರ ಸರ್ಕಾರದಿಂದ ಇನ್ನೂ ಯೂರಿಯಾ ಬಂದಿಲ್ಲವೆಂದು ರಾಜಕೀಯವಾಗಿ ಹೇಳತಕ್ಕಂಥದ್ದು ಸರಿಯಲ್ಲ. ಈ ರೀತಿ ಹೇಳಿದರೆ ಜನರಿಗೆ ಮೆನೇಜ್ ಏನು ಹೋಗುತ್ತದೆ ಹೇಳಿ. ಮಾನ್ಯ ಮುಖ್ಯಮಂತ್ರಿಗಳೆ ಒಂದು ಕಡೆ ಏನು ಹೇಳುತ್ತಾರೆಂದರೆ, ಕಳೆದ ಆರ್ಥಿಕ ವರ್ಷಕ್ಕಿಂತ ಈ ಸಾಲಿನ ಆರ್ಥಿಕ ವರ್ಷದಲ್ಲಿ we are getting more than 35% of grants when compared to last year grants ಎಂದು ಹೇಳುತ್ತಾರೆ. ಇನ್ನೊಂದು ಕಡೆ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ತೋರಿಸುತ್ತಿದೆ ಎಂದು ಹೇಳುತ್ತಾರೆ. ಕೇವಲ ರಾಜಕೀಯಕ್ಕೋಸ್ಕರ ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸತಕ್ಕಂಥ ಪ್ರಯತ್ನ ನಡೆಯುತ್ತಿದೆಯಲ್ಲ ಇದು ಸರಿಯಲ್ಲ. ಕೇಂದ್ರ ಸರ್ಕಾರ ಗೊಬ್ಬರವನ್ನು ರಾಜ್ಯಕ್ಕೆ ಹಂಚಿಕೆ ಮಾಡದೇ ಇದ್ದರೂ ಕೂಡ ವಿರೋಧ ಪಕ್ಷದವರು ಸುಮ್ಮನೆ ಟೀಕೆಯನ್ನು ಮಾಡುತ್ತಾರೆ ಎಂದರೆ ಹೇಗೆ? ನಮಗೇನೂ ಬೇರೆ ಕೆಲಸವಿಲ್ಲವೆ? ಟೀಕೆ ಮಾಡುವುದೇ ಒಂದು ಕೆಲಸವೇ? ಹಾಗಾದರೆ ವಿರೋಧ ಪಕ್ಷದವರ ಕೆಲಸವೇನು? ನೀವು ತಪ್ಪು ಮಾಡಿದರೂ ಕೂಡ ನಾವು ಸುಮ್ಮನೆ ನೋಡಿಕೊಂಡು ಕುಳಿತುಕೊಳ್ಳುವುದೆ? ರಾಜ್ಯದಲ್ಲಿ ಗೊಬ್ಬರದ ಸಮಸ್ಯೆ ಇದ್ದರೆ ನಾವು ನೋಡಿಕೊಂಡು ಕುಳಿತುಕೊಳ್ಳುವುದೆ? ಹಾಗಾದರೆ ನಮಗೇನು ಕೆಲಸ ಹೇಳಿ. ನಿಮಗೆಷ್ಟು ಜವಾಬ್ದಾರಿ ಇದೆಯೋ ಅಷ್ಟೇ ಜವಾಬ್ದಾರಿ ಈ ಕಡೆ ಕುಳಿತಿರುವ ವಿರೋಧ ಪಕ್ಷದವರಿಗೂ ಇದೆ. We are also equally responsible. You may be answerable to the Legislature, but we are also answerable to the people. ನಾವು ಕೂಡ ರಾಜ್ಯದ ಜನರಿಗೆ ಉತ್ತರವನ್ನು ಕೊಡಬೇಕಾಗುತ್ತದೆ. ಅವರ ಹಿತ ಕಾಪಾಡಬೇಕೆನ್ನುವ ಜವಾಬ್ದಾರಿ ನಮಗೂ ಇದೆ. ಆ ಕೆಲಸವನ್ನು ನಾವು ಮಾಡಲೇಬೇಕು. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳೆ, ನೀವು ಪದೇ ಪದೇ ಗೊಬ್ಬರ ಬಂದಿಲ್ಲವೆಂದು ಹೇಳಬಾರದು ಈಗಾಗಲೇ ಗೊಬ್ಬರ ಇದ್ದರೂ ಕೂಡ ಇರುವ ಗೊಬ್ಬರವನ್ನು ಸರಿಯಾಗಿ ಹಂಚುವುದಕ್ಕೆ ಇದ್ದರೂ ಕೂಡ ಏಕೆ ನಿಮಗೆ ಕೊಡುವುದಕ್ಕೆ ಆಗಲಿಲ್ಲ? ಇನ್ನೂ ಐದು ಜಿಲ್ಲೆಗಳಲ್ಲಿ ಇದುವರೆಗೆ ಮಳೆ ಕೂಡ ಬಿದ್ದಿಲ್ಲ. ಮಂಡ್ಯ, ತುಮಕೂರು, ಕೋಲಾರ, ಮೈಸೂರು ಮತ್ತು ಚಾಮರಾಜನಗರದಲ್ಲಿ ಇನ್ನೂ ಯೂರಿಯಾವನ್ನು ಬಳಸುತ್ತಲೇ ಇಲ್ಲ. ಏಕೆಂದರೆ ಆ ಭಾಗಗಳಲ್ಲಿ ಇನ್ನೂ ಮಳೆ ಬಂದಿಲ್ಲ. ಗುಲ್ಬರ್ಗಾದಲ್ಲಿಯೂ ಮಳೆ ಇನ್ನೂ ಬಂದಿಲ್ಲ. ನನಗೆ ಗೊತ್ತಿರುವ ಪ್ರಕಾರ ನಿಮಗೆ requirement 4 ಲಕ್ಷ ಟನ್ ಸಾಕು. ಈಗಾಗಲೇ ನಿಮಗೆ ಕೇಂದ್ರ ಸರ್ಕಾರದಿಂದ 2 ಲಕ್ಷದ 12 ಸಾವಿರ ಮೆಟ್ರಿಕ್ ಟನ್ ಬಂದಿದೆ. ಹೀಗಿದ್ದರೂ ಕೂಡ ಏಕೆ ಇದನ್ನೂ ನಿಮ್ಮ ಕೈಯಲ್ಲಿ ಸರಿಯಾಗಿ ಹಂಚುವುದಕ್ಕೆ ಆಗಿಲ್ಲ? Is it not your failure? ಆ ಕಾರಣದಿಂದಲೇ ರೈತರು ಇವತ್ತು ಗಲಾಟೆಯನ್ನು ಮಾಡುತ್ತಿರುವುದು. ಆದುದರಿಂದ ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ

ವಿಸ್ತಾರವಾಗಿ ಚರ್ಚೆ ಮಾಡುವುದಕ್ಕೋಸ್ಕರವಾಗಿ ತಾವು ಅನುಮತಿಯನ್ನು ಕೊಡಬೇಕೆಂಬುದು preliminary submission ಮೊಡುತ್ತಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ನಾನು ಮಾತನಾಡಲು ತಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು;– ನನಗೆ ಬಂದಿರುವ ನೋಟಿಸ್‌ನಲ್ಲಿ ನೀವು ಸಹಿಯನ್ನು ಮಾಡಿಲ್ಲ.

ಶ್ರೀ ಟಿ.ಬಿ. ಜಯಚಂದ್ರ:– ನಾನು ಕಛೇರಿಗೆ ಬರುವಷ್ಟರಲ್ಲಿಯೇ ನಿಮಗೆ ನೋಟಿಸ್ ಹೊರಟುಹೋಗಿತ್ತು. ನಾನು ಸ್ವಲ್ಪ ತಡವಾಗಿ ಪಕ್ಷದ ಕಛೇರಿಗೆ ಬಂದೆ. ಆದರೆ ಈಗ ತಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ. ಏಕೆಂದರೆ ನಾನೂ ಕೂಡ ಹಿಂದೆ ಕೃಷಿ ಸಚಿವನಾಗಿದ್ದವನು. ಆದುದರಿಂದ ವಾಸ್ತವಾಂಶವೇನಿದೆ ಎಂಬುದನ್ನು ಈ ಸಭೆಯ ಗಮನಕ್ಕೆ ತರಬೇಕೆನ್ನುವ ದೃಷ್ಟಿಯಿಂದ ನಾನು ಮಾತನಾಡಲು ತಮ್ಮ ಅನುಮತಿಯನ್ನು ಕೇಳಿದ್ದು. ಮಾನ್ಯ ಅಧ್ಯಕ್ಷರೆ, ಈಗ ಬಂದಿರತಕ್ಕಂಥದ್ದರಲ್ಲಿ ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆ ಮತ್ತು ಮಾನ್ಯ ಮಂತ್ರಿಗಳ ಹೇಳಿಕೆಗಳ ಬಗ್ಗೆ ನಮ್ಮ ನಾಯಕರು ಈಗಾಗಲೇ ಪ್ರಸ್ತಾಪವನ್ನು ಮಾಡಿದ್ದಾರೆ. ಆದರೆ ಮಾದ್ಯಮದಲ್ಲಿ ಒಂದೊಂದು ಪತ್ರಿಕೆಯಲ್ಲಿಯೂ ಕೂಡ ಒಂದೊದು ರೀತಿಯಲ್ಲಿ ವರದಿಯಾಗಿದೆ. ಆದರೆ ಬಹಳಷ್ಟು ಪತ್ರಿಕೆಗಳಲ್ಲಿ ಬಂದಿರತಕ್ಕಂಥದ್ದರಲ್ಲಿ ಮತ್ತು ಅದರಲ್ಲಿಯೂ editorial ನಲ್ಲಿ ಬರೆದಿರತಕ್ಕಂಥದ್ದನ್ನೂ ಕೂಡ ನೋಡಿದಾಗ ಏನೆನಿಸುತ್ತದೆಯೆಂದರೆ, ರಾಜ್ಯದಲ್ಲಿ ಈಗ ಸದನ ನಡೆಯುತ್ತಿರತಕ್ಕಂಥ ಸಂದರ್ಭದಲ್ಲಿ ರಾಜ್ಯದ ಜನರಿಗೆ ಬಹುಶಃ ತಪ್ಪು ಸಂದೇಶ ಹೋಗುತ್ತಿದೆಯೆಂದೆನಿಸುತ್ತಿದೆ. ಬಹುಶಃ ಮಾನ್ಯ ಮುಖ್ಯಮಂತ್ರಿಗಳ ಮಾತಿನ ಅರ್ಥವೇನಿದೆಯೆಂದರೆ, ಇವರು ಕೇಂದ್ರದ ಕಡೆಗೆ ಬೆಟ್ಟು ತೋರಿಸತಕ್ಕಂಥ ಕೆಲಸವನ್ನು ಮಾಡುತ್ತಿದ್ದಾರೆಂದು ಅನಿಸುತ್ತಿದೆ. ಗೊಬ್ಬರ ಬೇಗ ರವಾನೆಯಾಗಬೇಕು, ಈ ವಿಚಾರದಲ್ಲಿ ಕೇಂದ್ರ ರಾಜ್ಯದ ಜೊತೆಗೆ ಅಸಹಕಾರವನ್ನು ತೋರಿಸುತ್ತದೆ, ಸಹಕಾರ ಕೊಡುತ್ತಿಲ್ಲವೆನ್ನತಕ್ಕಂಥ ರೀತಿಯಲ್ಲಿ ಮುಖ್ಯಮಂತ್ರಿಗಳಿಂದ ಈ ಹೇಳಿಕೆಯನ್ನು ಪಡೆಯತಕ್ಕಂಥದ್ದು ಆಗಿದೆ. ಬಹುಶಃ ಗೊಬ್ಬರದ ಕೊರತೆ ಎಲ್ಲೆಲ್ಲಿ ಹೇಗಿದೆ ಎಂಬ ಬಗ್ಗೆ ಅವರ ಹತ್ತಿರ ಅಂಕಿ ಅಂಶವಿದೆ. ನಮ್ಮ ಹತ್ತಿರ ಅಂಕಿ ಅಂಶವಿಲ್ಲ. ಅವರಲ್ಲಿದೆ. ಆದುದರಂದ ಅವರು ಕೊಡಲಿ. ಆದರೆ ಸದನ ನಡೆಯುವಂಥ ಸಂದರ್ಭದಲ್ಲಿ, ಗೊಬ್ಬರದ ವಿಚಾರ ಪ್ರಸ್ತಾಪವಾಗಿರತಕ್ಕಂಥ ಸಂದರ್ಭದಲ್ಲಿ, ವಿರೋಧ ಪಕ್ಷದವರನ್ನು ಕರೆದು ಈ ವಿಚಾರವಾಗಿ ಪ್ರಸ್ತಾಪವನ್ನು ಮಾಡಬಹುದಾಗಿತ್ತು. ತಾವು ಯಾರೂ ಕೂಡ ಇದನ್ನು ಮಾಡಲಿಲ್ಲ. ಕೇಂದ್ರ ಸರ್ಕಾರದಲ್ಲಿ ಈಗ ನಮ್ಮ ಯು.ಪಿ.ಎ. ಸರ್ಕಾರವಿದೆ. ಆ ಸರ್ಕಾರದಲ್ಲಿ ನಮ್ಮ ರಾಜ್ಯದವರೇ ನಾಲ್ಕೈದು ಜನರು ಸಚಿವರುಗಳಾಗಿದ್ದಾರೆ. ಆದುದರಿಂದ ಗೊಬ್ಬರದ ವಿಚಾರದಲ್ಲಿ ಕೇಂದ್ರದ ಮೇಲೆ ನಾವು ಹೆಚ್ಚಿನ ಪ್ರಭಾವವನ್ನು ಬೀರುವುದಕ್ಕೆ ಸಾಧ್ಯವಿದೆ. ಹೀಗಿರುವಾಗ ಈ ಗೊಬ್ಬರದ ವಿಚಾರವಾಗಿ ವಿರೋಧ ಪಕ್ಷದವರ ಜೊತೆ ನೀವು

ಯಾವುದಾದರೂ ಸಂದರ್ಭದಲ್ಲಿ ಚರ್ಚೆ ಮಾಡಿ ಈ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಕೊಟ್ಟಿದ್ದರೆ ನಾವು ಕೇಂದ್ರ ಸರ್ಕಾರದ ಮುಂದೆ ಹೋಗಿ ಮಾತನಾಡುವುದಕ್ಕೆ ಅವಕಾಶವಾಗುತ್ತಿತ್ತು. ಇದುವರೆಗೂ ನೀವು ಅದ್ಯಾವುದನ್ನೂ ಮಾಡದೇ ಇದ್ದರೂ ಕೂಡ ಮಾನ್ಯ ಮುಖ್ಯಮಂತ್ರಿಗಳ ಮಾತು ಏನಿದೆಯೆಂದರೆ, ವಿರೋಧ ಪಕ್ಷದವರು ನಮ್ಮನ್ನು ಟೀಕೆ ಮಾಡುವ ಬದಲು ಕೇಂದ್ರದ ಕಡೆ ನೋಡಿ ಎಂದು ಹೇಳುತ್ತಾರೆ. ನಾವು ಯಾವತ್ತಾದರೂ, ನಾನಿರಬಹುದು, ಸಿದ್ದರಾಮಯ್ಯನವರಿರಬಹುದು ಅಥವಾ ಯಾರೇ ಆದರೂ ಕೂಡ ಗೊಬ್ಬರದ ವಿಚಾರದಲ್ಲಿ ಟೀಕೆ ಮಾಡಿಲ್ಲ. ಗೊಬ್ಬರದ ವಿಚಾರದಲ್ಲಿ ಟೀಕೆ ಮಾಡಿರತಕ್ಕಂಥವರು ಯಾರೆಂದರೆ, ಈ ರಾಜ್ಯದಲ್ಲಿ ಮಂತ್ರಿಗಳಾಗಿರತಕ್ಕಂಥ ಜಿಲ್ಲೆಯಲ್ಲಿರುವ ರೈತ, ಮುಖ್ಯಮಂತ್ರಿಗಳಾಗಿರತಕ್ಕಂಥ ಜಿಲ್ಲೆಯಲ್ಲಿರುವ ರೈತ ಗೊಬ್ಬರದ ಬಗ್ಗೆ ಪ್ರಶ್ನೆ ಮಾಡಿದ್ದಾನೆಂದಾಗ, ಈ ಬಗ್ಗೆ ಮಾದ್ಯಮದಲ್ಲಿ ನಾವು ಕೂಡ ನೋಡುತ್ತಿದ್ದೇವೆ, ಅದನ್ನು ನಾವು ನೋಡಿ ಅರ್ಥ ಮಾಡಿಕೊಳ್ಳುತ್ತಿದ್ದೇವೆ. ಇಂಥ ಸಂದರ್ಭದಲ್ಲಿ ವಿರೋಧ ಪಕ್ಷದಲ್ಲಿರುವ ನಾವುಗಳೂ ಕೂಡ ಕುಳಿತು ಇದಕ್ಕೆ ಏನು ಪರಿಹಾರವೆನ್ನುವ ಬಗ್ಗೆ ಚಿಂತನೆಯನ್ನು ಮಾಡುತ್ತಿದ್ದೇವೆ. ಅದರ ಬಗ್ಗೆ ನಮ್ಮ ಜವಾಬ್ದಾರಿಯ ಬಗ್ಗೆ ನಾವೇನೋ ವಿಮುಖರಾಗುತ್ತಿದ್ದೇವೆ. ನಮ್ಮ ರಾಜ್ಯದವರೇ ಕೇಂದ್ರ ಸರ್ಕಾರದಲ್ಲಿ ಮಂತ್ರಿಗಳಾಗಿರತಕ್ಕಂಥವರು ಕೂಡ ಇದರ ಬಗ್ಗೆ ತಮ್ಮ ಪ್ರಭಾವವನ್ನು ಬೀರುವುದರಲ್ಲಿ ವಿಫಲಾರಾಗುತ್ತಿದ್ದೇವೆ ಎನ್ನತಕ್ಕಂಥ ಭಾವನೆ ಬೇಡ. ಆದರೆ ಎಲ್ಲೋ ಒಂದು ಕಡೆ ಈ ಗೊಬ್ಬರದ ಕೊರತೆಯ ಜೊತೆಗೆ ಬೇರೆ ಬೇರೆ ರೀತಿಯ ಕೊರತೆಗಳು ಕಾಣುತ್ತಿದೆ ಎನ್ನತಕ್ಕಂಥ ಭಾವನೆ ಬರುತ್ತಿದೆ. ಅಂದರೆ ರಾಜಕೀಯವಾಗಿ ಇರತಕ್ಕಂಥ ಇಚ್ಚಾಶಕ್ತಿಯ ಕೊರತೆಯೋ ಅಥವಾ ಯಾವ ರೀತಿಯಾಗಿರತಕ್ಕಂಥದ್ದು? ನಿಜವಾಗಿ ವಾಸ್ತವಾಂಶವೇನಿದೆ ಎಂಬ ಬಗ್ಗೆ ನನಗೂ ಕೂಡ ಗೊತ್ತಿರತಕ್ಕಂಥದ್ದು. ಮಾನ್ಯ ಸುರೇಶ್‌ಕುಮಾರ್‌ರವರಿಗೆ ನಾನು ಹೇಳುತ್ತೇನೆ. ಮಾನ್ಯ ಸಭಾಧ್ಯಕ್ಷರ ಗಮನಕ್ಕೆ ತರುತ್ತೇನೆ. ಬಿತ್ತನೆ ಕಾರ್ಯಕ್ರಮವನ್ನು ಪ್ರಾರಂಭ ಮಾಡುವುದಕ್ಕೆ ಮುಂಚೆಯೇ ದೆಹಲಿಯಲ್ಲಿ ಒಂದು ಸಭೆಯನ್ನು ಕರೆಯುತ್ತಾರೆ ಮತ್ತು ಆ ಸಭೆಯಲ್ಲಿ ಯಾವ ಯಾವ ಜಲ್ಲೆಗಳಿಗೆ ಎಷ್ಟೆಷ್ಟು ಗೊಬ್ಬರವನ್ನು ಕೊಡಬೇಕು ಎಂಬ ಬಗ್ಗೆ ಕೇಂದ್ರ ಸರ್ಕಾರ ತೀರ್ಮಾನವನ್ನು ಮಾಡುತ್ತದೆ. ಈ ರೀತಿಯ ತೀರ್ಮಾನ ಮಾಡಿ ಅವರು ಅಲಾಟ್‌ಮೆಂಟ್ ಮಾಡಿದ ಮೇಲೆ ಅದನ್ನು supply ಮಾಡತಕ್ಕಂಥ ಜವಾಬ್ದಾರಿ ಕಂಪನಿಗಳ ಮೇಲೆ ಇರುತ್ತದೆ. ಇವತ್ತು ಇಫ್ಕೋ ಇರಬಹುದು, ಕ್ರಿಬ್ಕೋ ಇರಬಹುದು, ಇನ್ನಿತರ ಯಾವ್ಯಾವುದೋ ಕಂಪನಿಗಳಿವೆ. ಇವತ್ತು international level ನಲ್ಲಿ ಇರತಕ್ಕಂಥ ಕಂಪನಿಯಿಂದ national level ನಲ್ಲಿ ಇರತಕ್ಕಂಥ ಅನೇಕ ಕಂಪನಿಗಳಿವೆ. ಇದಲ್ಲದೇ ರಾಜ್ಯ ವ್ಯಾಪ್ತಿಯಲ್ಲಿ ಬರತಕ್ಕಂಥ ಕೆಲವು ಕಂಪನಿಗಳೂ ಕೂಡ ಇವೆ. ಅವರಿಗೆ ಕೇಂದ್ರ ಸರ್ಕಾರದವರು ರವಾನೆಯನ್ನು ಮಾಡುತ್ತಾರೆ. ಇವೊತ್ತು ಏನಾದರೂ ಕೂಡ ಗೊಬ್ಬರ ಪೂರ್ಯೆಕೆಯಲ್ಲಿ ವಿಳಂಬವಾಗಿದ್ದರೆ ಆ

ಹಂತದಲ್ಲಿ ಆಗಿರುತ್ತದೆ. ಅದಕ್ಕೆ ಕೇಂದ್ರ ಸರ್ಕಾರ ಜವಾಬ್ದಾರಿಯಾಗುವುದಿಲ್ಲ. ಅಂದರೆ ಟ್ರಾನ್ಸ್‌ಪೋರ್ಟೆಶನ್‌ನಲ್ಲಿ ಆಗಿರಬಹುದು, ರೈಲ್ವೆ ಬುಕ್ಕಿಂಗ್ ಮಾಡುವುದರಲ್ಲಿ ಆಗಿರಬಹುದು ಅಥವಾ ಲಾರಿ ಸ್ಟ್ರೈಕ್ ಆಯಿತು ಎಂದಿಟ್ಟುಕೊಳ್ಳೋಣ, ಲಾರಿಯವರೂ ಯಾರೂ ಕೂಡ co-operate ಮಾಡಿರುವುದಿಲ್ಲವೆಂದಿಟ್ಟುಕೊಳ್ಳೋಣ, ಆಗ ಗೊಬ್ಬರ ಹೋಗುವುದು ತಡವಾಗುತ್ತದೆ. ಇಂಥ ಸಂದರ್ಭದಲ್ಲಿ ರೈತರು panic ಆಗತಕ್ಕಂಥದ್ದು ಸ್ವಾಭಾವಿಕ. ಇಂಥ ಸಂದರ್ಭದಲ್ಲಿ ಬೇರೆ ಜಿಲ್ಲೆಗಳಲ್ಲಿ ಇರುವ ಗೊಬ್ಬರವನ್ನು ತರಿಸಿಕೊಂಡು ಅಗತ್ಯವಿರುವ ಜಿಲ್ಲೆಗೆ ಕೊಡಬೇಕಾಗಿತ್ತು. ಈ ರೀತಿಯಾಗಿ ನಿರ್ವಹಣೆ ಮಾಡತಕ್ಕಂಥದ್ದರಲ್ಲಿ ನೀವು ವಿಫಲರಾಗಿದ್ದೀರಿ. ನಿಮಗೆ ಒಟ್ಟಾರೆ ವರ್ಷದಲ್ಲಿ ಬೇಡಿಕೆ ಇಷ್ಟು ಎಂದು ಇರುತ್ತದೆ. ಅದನ್ನು ಎಲ್ಲವನ್ನೂ ಒಂದೇ ಸಾರಿ dump ಮಾಡಬೇಕು ಎನ್ನುವ ಪ್ರಶ್ನೆಯಲ್ಲ. ಅದನ್ನು ನಿರ್ವಹಣೆ ಮಾಡಬೇಕಾದಾಗ ನೀವು ಏನು ಮಾಡಬೇಕಾಗುತ್ತದೆ ಎಂಬ ಬಗ್ಗೆ ನೋಡಬೇಕಾಗುತ್ತದೆ. ಉದಾಹರಣೆಗೆ ನಾನು ಹೇಳುವುದೇನೆಂದರೆ, ಈಗ ನಮ್ಮ ತುಮಕೂರು ಜಿಲ್ಲೆಯಲ್ಲಿ ಯೂರಿಯಾ ಕೊರತೆಯಿಲ್ಲ. ಆದರೆ ಹಾವೇರಿ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಯೂರಿಯಾ ಕೊರತೆ ಇರುವಾಗ ನೀವು ತುಮಕೂರು ಜಿಲ್ಲೆಯಿಂದ ಯೂರಿಯಾವನ್ನು ಕಳುಹಿಸಬೇಕಾಗಿತ್ತು. ಈ ರೀತಿಯಲ್ಲಿ ನಿರ್ವಹಣೆಯಲ್ಲಿ ಮಾಡುವುದರಲ್ಲಿ ನೀವು ವಿಫಲರಾಗಿ ಇವತ್ತು ಗೊಬ್ಬರ ಕೊರತೆ ಇದೆಯೆಂದು ಮುಖ್ಯಮಂತ್ರಿಗಳ ಬಾಯಿಯಿಂದ ಹೇಳಿಸಿಬಿಡುತ್ತೀರಲ್ಲ. ನಾನೊಂದು ಮಾತನ್ನು ಹೇಳುತ್ತೇನೆ, ಸದನ ನಡೆಯುವಂಥ ಸಂದರ್ಭದಲ್ಲಿ ಸದನದಲ್ಲಿಯೇ ಈ ಬಗ್ಗೆ ಚರ್ಚೆ ಮಾಡಿ ಒಂದು ಒಳ್ಳೆಯ ಸಂದೇಶವನ್ನು ರಾಜ್ಯದ ರೈತರಿಗೆ ಕೊಡಬಹುದಾಗಿತ್ತು. ಇದರಲ್ಲಿ ಕೇಂದ್ರ ಸರ್ಕಾರದ ಪಾತ್ರವಿದೆಯೇ ಅಥವಾ ರಾಜ್ಯ ಸರ್ಕಾರದ ವೈಫಲ್ಯತೆ ಇದೆಯೇ ಎನ್ನತಕ್ಕಂಥದ್ದರ ಬಗ್ಗೆ ಹೇಳಬಹುದಾಗಿತ್ತು. ಸದನ ನಡೆಯತಕ್ಕಂಥ ಸಂದರ್ಭದಲ್ಲಿಯೇ ಇವತ್ತು ಸದನದ ಹೊರಗೆ ಹೇಳುತ್ತೇನೆ ಎನ್ನತಕ್ಕಂಥ ಮಾತು, ನಿಮ್ಮ ಮಾತಿನಲ್ಲಿರತಕ್ಕಂಥ ವ್ಯಂಗ್ಯ ಏನಾಗುತ್ತದೆಯೆಂದರೆ, ಎಲ್ಲೋ ಒಂದು ಕಡೆ ಎಲ್ಲರನ್ನೂ ಕೂಡ ಕೆರಳಿಸತಕ್ಕಂಥದ್ದಾಗುತ್ತದೆ. ಅದೇನಾದರೂ ಆಗಲಿ, ನಮ್ಮನ್ನು ಕೆರಳಿಸುವ ಪ್ರಶ್ನೆ ಬೇರೆ. ಆದರೆ ಇವತ್ತು ರಾಜ್ಯದ ರೈತರಾಗಿರತಕ್ಕಂಥವರು ಬಹಳ ಯೋಚನೆ ಮಾಡಬೇಕಾಗಿದೆ. ಮುಖ್ಯಮಂತ್ರಿಗಳ ಹೇಳಿಕೆಯಲ್ಲಿ ಯೂರಿಯಾ ಕೊರತೆ ಇದೆ ಎಂದು ಹೇಳಿದಾಗ ಎಲ್ಲರೂ ಕೂಡ ಯೂರಿಯಾ ತೆಗೆದುಕೊಳ್ಳಲು ಮುಗಿ ಮೇಲೆ ಬೀಳತಕ್ಕಂಥ ಪ್ರಶ್ನೆಯಾಗುತ್ತದೆ. ಯೂರಿಯಾ ನಮಗೆ ಬೇಕು, ನಮಗೆ ಬೇಕು ಎಂದು ಮುಗಿ ಬೀಳುತ್ತಾರೆ. ಆದುದರಿಂದ ಗೊಬ್ಬರದ ವಿಚಾರದಲ್ಲಿ ವಾಸ್ತವಾಂಶವೇನಿದೆ ಎಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ತಾವು ಅಧಿಕಾರ ಸ್ವೀಕಾರ ಮಾಡಿದಂಥ ಸಂದರ್ಭದ ತದನಂತರದಲ್ಲಿ ನಡೆದಂಥ ಘಟನೆಗಳನ್ನು ಮರೆತಿರಬಹುದೇನೋ ಎಂದು ನನಗೆ ಅನ್ನಿಸುತ್ತಿದೆ. ಇವತ್ತು ಅದನ್ನು

ಗಮನದಲ್ಲಿಟ್ಟುಕೊಂಡೇ ಈ ರೀತಿ ಹೇಳಿಕೆಯನ್ನು ಕೊಡುತ್ತಿದ್ದೀರೇನೋ ಎಂದು ಅನಿಸುತ್ತಿದೆ. ಇವತ್ತು ಕೇಂದ್ರ ಸರ್ಕಾರದಿಂದ ಯಾವುದೇ ತೊಂದರೆಯಾಗಿಲ್ಲ. ಗೊಬ್ಬರದ ಪೂರ್ಯೆಕೆಯಲ್ಲಿ ನೀವು ನಿರ್ವಹಣೆ ಮಾಡುವುದರಲ್ಲಿ ಆಗಿರತಕ್ಕಂಥ ತೊಂದರೆಯಿಂದ ಈ ರೀತಿಯಾಗಿದೆ. ಆದರೆ ಒಂದು ಮಾತನ್ನು ನಾನು ಹೇಳುತ್ತೇನೆ, ಬಹುಶಃ ಇಷ್ಟೊತ್ತಿಗೆ ಈ ರಾಜ್ಯದಲ್ಲಿ ಮಳೆ ಏನಾದರೂ ಬಂದಿದ್ದೆಯಾಗಿದ್ದರೆ, ಬಿತ್ತನೆ ಕಾರ್ಯಕ್ರಮ ಜುಲೈ end ಒಳಗಾಗಿ ಮುಗಿಯಬೇಕಾಗಿತ್ತು. ಅಂದರೆ ಸುಮಾರು 69 ರಿಂದ 71 ಲಕ್ಷ ಎಕರೆಗೆ ಬಿತ್ತನೆ ಕಾರ್ಯಕ್ರಮವಾಗಬೇಕಾಗಿತ್ತು. ಆದರೆ ನಮ್ಮ ಜಿಲ್ಲೆಯನ್ನು ತೆಗೆದುಕೊಂಡರೆ ಇವತ್ತು ಬಿತ್ತನೆಯಾಗಿರುವುದು ನಿಮಗೆ ಗೊತ್ತಿದೆ, 15 ರಿಂದ 20% ಬಿತ್ತನೆಯಾಗಿಲ್ಲ. ಆದ್ಗಾಗ್ಯೂ ಕೂಡ ಗೊಬ್ಬರದ ದಾಸ್ತಾನು ಇದೆ, ಗೊಬ್ಬರಕ್ಕೆ ಕೊರತೆ ಇಲ್ಲ. Panic ಆಗಿರುವಂತಹ ಸಂದರ್ಭದಲ್ಲಿ ಸ್ವಲ್ಪ ಒತ್ತಡ ಇರುತ್ತದೆ. ರೈತನಿಗೆ ಏನಾಗಿದೆ ಎಂದರೆ ನಿಮಗೆ ಹಿಂದಿನ ಅನುಭವ ಇದೆಯಲ್ಲ, ಗೊಬ್ಬರ ಸಿಗುವುದು ಸ್ವಲ್ಪ ತಡವಾಯಿತು ಎಂದರೆ

ಅಧ್ಯಕ್ಷರು: ಜಯಚಂದ್ರರವರೇ, ತಾವು ಪ್ರಿಲಿಮಿನರಿ ಸಬ್‌ಮಿಷನ್ ಅಷ್ಟೆ ಮಾಡಿ.

ಶ್ರೀ ಟಿ.ಬಿ. ಜಯಚಂದ್ರ: ಏನು ಸ್ವಾಮಿ ನೀವು, ಇದು ರೈತರ ಸಮಸ್ಯೆ

ಅಧ್ಯಕ್ಷರು: ಜಯಚಂದ್ರರವರೇ, ನೀವು ಅರ್ಥಮಾಡಿಕೊಳ್ಳಬೇಕು. ನೀವು ಚರ್ಚೆ ಮಾಡುವುದಕ್ಕೆ ನಾನು ಬೇಡವೆಂದು ಹೇಳುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಿಲಿಮಿನರಿ ಸಬ್‌ಮಿಷನ್ ಎಂದು ಹೇಳಿದರಲ್ಲ

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೇ, ಧಾರವಾಡದ ರೈತರು ಈಚೆ ಬರಬಾರದು. ನನಗೆ ಏಕೋ ಅನುಮಾನ ಇದೆ. ಅವರು ಈಚೆ ಬರಬಾರದು ಎನ್ನುವ ಕಾರಣಕ್ಕೋಸ್ಕರ ನಾನು ಹೇಳುತ್ತಿರುವುದು. ಇಲ್ಲಿ ಬೇರೆ ಬೇರೆ ಅಭಾವಗಳು ಸೇರಿರುವುದು ಬಹಳ ಮುಖ್ಯ. ನಾನು ಆ ಕಾರಣಕ್ಕೆ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಇಲ್ಲಿ ಗೊಬ್ಬರದ ಅಭಾವ ಎಷ್ಟಿದೆ, ಏನು ಎನ್ನುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟಾಗ, ಆಗ ನಾವು ಉಪ ಪ್ರಶ್ನೆ ಕೇಳುವುದಕ್ಕೆ ಹೇಳಿ ಎಲ್ಲಿ ಗೊಬ್ಬರದ ಕೊರತೆ ಇತ್ತು ಎನ್ನುವುದನ್ನು ನಾವು ಎತ್ತಿ ತೋರಿಸುತ್ತೇವೆ. ಆದರೆ ನಾನು ಒಂದು ಮಾತನ್ನು ಹೇಳುತ್ತೇನೆ, ಯುರೇಟ್ ಆಫ್ ಪೊಟಾಷ್ ಏನಿದೆ, ಅದು ಇವತ್ತು International marketನಲ್ಲಿ rate ಜಾಸ್ತಿಯಾಗಿ, ಅದೂ ಕೂಡ ಸಿಗುತ್ತಿಲ್ಲ. ಈ ದೇಶದಲ್ಲಿ ಅದನ್ನು supply ಮಾಡುವವರು ನಾಲ್ಕೈದು ಜನ ಇರಬಹುದು. ಇವತ್ತು ಸಿಕ್ಕಾಪಟ್ಟೆ ಬೆಲೆ ಜಾಸ್ತಿಯಾಗಿರುವಂತಹ ಹಿನ್ನೆಲೆಯಲ್ಲಿ ಅದರ ಕೊರತೆ ಇರುವಂತಹ ಕಾರಣ ಇದೆ. ಇವತ್ತು urea ಅಲ್ಲ, complex ಗೊಬ್ಬರ ಸಿಗುತ್ತಿಲ್ಲ. Complex ಗೊಬ್ಬರ ಸಿಗದಿರುವಂತಹ

ಕಾರಣವೇನೆಂದರೆ MOP ಎನ್ನುವ ಒಂದು product ಸಿಗದಿರುವುದಕ್ಕೆ ಇದು ಕೊರತೆಯಾಗಿದೆ. ಅದಕ್ಕೆ alternative ಆಗಿ DAP ಅನ್ನು supply ಮಡುತ್ತಿದ್ದೀರಿ. ನಮಗೆ ವಾಸ್ತವಿಕವಾಗಿ ಏನು confusion ಆಗಿದೆ ಎಂದರೆ ನಾವು DAP ಉಪಯೋಗಿಸಬೇಕೇ? MAP ಸಿಗುತ್ತಿಲ್ಲ, complex ಗೊಬ್ಬರ ಸಿಗುತ್ತಿಲ್ಲ, ಅದಕ್ಕೆ ಕೊರತೆಯಾಗುತ್ತಿದೆ. ಸ್ವಾಮಿ ಇನ್ನು 15 ದಿವಸದಲ್ಲಿ ಮಳೆ ಬಂತೆಂದರೆ ಕೊರತೆಯಾಗುವುದು guarantee. ಆಗ ಮತ್ತೆ ನಾವು ನಿಮಗೆ ಹೇಳವಂತಹ ಪ್ರಶ್ನೆ ಬೇಡ. ಆ ಕಾರಣಕ್ಕೆ ಹೇಳುತ್ತೇನೆ, Marketing Federation ಇರತಕ್ಕಂಥದ್ದು ಅವರ ಮುಖೇನ ಇವತ್ತು ಗೊಬ್ಬರ ತರಿಸಬೇಕೆಂದು ಹಿಂದೆ ನಾವು ಸಲಹೆ ಕೊಟ್ಟೆವು. ಪ್ರಾರಂಭದಲ್ಲಿ ನೀವು ಅದನ್ನು ಒಪ್ಪಲಿಲ್ಲ. ಆಮೇಲೆ ಅಂತಿಮವಾಗಿ ಅವರಿಂದ 250–300 ಕೋಟಿ ರೂಪಾಯಿಯ ಗೊಬ್ಬರವನ್ನು ತರಿಸುವಂತಹ ಕೆಲಸವನ್ನು ಮಾಡಿದಿರಿ. ಒಂದು ಮಾತನ್ನು ತಾವು ತಿಳಿದುಕೊಳ್ಳಿ, ಇವತ್ತು ಗೊಬ್ಬರದ ಬೇಡಿಕೆ ಇರುವುದು ಕೇವಲ ಕರ್ನಾಟಕಕ್ಕೆ ಅಲ್ಲ, ಕೊರತೆ ಇಡೀ ದೇಶದಲ್ಲಿ ಇದೆ. ಆದರೆ ಬೇರೆ ರಾಜ್ಯದವರು ಯಾವರೀತಿ ನಿರ್ವಹಣೆ ಮಾಡುತ್ತಾರೆ ಎನ್ನುವುದರ ಬಗ್ಗೆ ಅಂಕಿಅಂಶವನ್ನು ಇಟ್ಟುಕೊಂಡು ಗೊಬ್ಬರವನ್ನು ತರಿಸಿಕೊಡತಕ್ಕಂಥ ಕೆಲಸವನ್ನು ಮಾಡಬೇಕು ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ, ಇವತ್ತು ನಮಗೆ ಉತ್ತರ ಕೊಡುವಂತಹ ಸಂದರ್ಭದಲ್ಲಿ ದಯಮಾಡಿ ಇವೆಲ್ಲ ವಿಚಾರಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಮುಂದಿನ ದಿನಗಳಲ್ಲಿ ತೊಂದರೆ ಆಗದಂತೆ ಯಾವ ರೀತಿಯಾಗಿ ನಿರ್ವಹಣೆ ಮಾಡುತ್ತೀರಿ, Contigency Plan ಏನು ಮಾಡಿದ್ದೀರಿ ಎನ್ನುವುದನ್ನು ತಾವು ಹೇಳಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತಾ, ಇವತ್ತು ನಮಗೆ ಗೊಬ್ಬರದ ಕೊರತೆಗಿಂತ ಬೇರೆ ಕೊರತೆ ಇರತಕ್ಕಂಥದ್ದಿದೆ. ಮಾನ್ಯ ಮುಖ್ಯಮಂತ್ರಿಗಳು ಎಲ್ಲೋ ಒಂದು ಕಡೆ ನಮ್ಮನ್ನು ನಿರ್ಲಕ್ಷಿಸುತ್ತಿದ್ದಾರೆ. ಸದನ ಪ್ರಾರಂಭವಾಗಿ ಎರಡೇ ದಿನವಾಗಿರುವುದು, ಆಗಲೇ ರೈತರ ಮೇಲೆ ಎತ್ತಿ ಕಟ್ಟುವಂತಹ ಪ್ರಯತ್ನ ಆಗುತ್ತಿದೆ ಎಂದು ಎಲ್ಲರೂ ಕೂಡ ಮಾತನಾಡುವಂತಹ ಸಂದರ್ಭ ಇದೆ, ಅದು ವಾಸ್ತವಿಕವಾದಂತಹ ಒಂದು ಅಂಶ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಂಡೆಪ್ಪ ಕಾಶಂಪೂರ್: ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಚಾರ ಮಾತನಾಡುತ್ತೇನೆ.

ಅಧ್ಯಕ್ಷರು: ನಿಲುವಳಿ ಸೂಚನೆ ಅವರು ಕೊಟ್ಟಿದ್ದಾರೆ, ಅದಕ್ಕೆ ಚರ್ಚೆಗೆ ಅವಕಾಶ ಸಿಕ್ಕಂತಹ ಸಂದರ್ಭದಲ್ಲಿ ತಾವು ಮಾತನಾಡುವಿರಂತೆ, ನಾನು ಅವಕಾಶ ಕೊಡುತ್ತೇನೆ. ಈಗ preliminary submission ಮಾಡಿದ್ದಾರೆ, ಅದಕ್ಕೆ ಸರ್ಕಾರ ಉತ್ತರ ಕೊಡಲಿ. ಮುಂದೆ ಇದಕ್ಕೆ ಅವಕಾಶ ಕೊಟ್ಟಂತಹ ಸಂದರ್ಭದಲ್ಲಿ ತಾವು ಮಾತನಾಡುವಿರಂತೆ, ಆಗ ನಾನು ತಮಗೆ ಅವಕಾಶ ಕೊಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೇ, ಮಾಜಿ ಸಚಿವರು ಮಾತನಾಡುತ್ತಾರೆ.

ಅಧ್ಯಕ್ಷರು: ಮಾನ್ಯ ರೇವಣ್ಣನವರು floor leader ಇದ್ದೀರಿ, ತಾವು preliminary submission ಬಗ್ಗೆ ಮಾತನಾಡಿ. ನೀವು ಅಥವಾ ಅವರಲ್ಲಿ ಯಾರಾದರೂ ಒಬ್ಬರು ಮಾತನಾಡಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಬಂಡೆಪ್ಪ ಕಾಶಂಪೂರ್‌ರವರು ಮಾಜಿ ಸಚಿವರು, ಒಂದೆರಡು ನಿಮಿಷ ಮಾತನಾಡಲಿ.

ಅಧ್ಯಕ್ಷರು: ಆಮೇಲೆ ಇದು ಚರ್ಚೆಗೆ ಮಂದಾಗ ನಾನು ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ನೀವು floor leader ಇದ್ದೀರಿ, ನೀವು ಬೇಕಾದರೆ ಮಾತನಾಡಿ, ಅದಕ್ಕೆ ನಿಮಗೆ ಅವಕಾಶ ಕೊಡುತ್ತಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ: ನೀವು ಅಲ್ಲಿ ಉಪ ನಾಯಕರಿಗೆ ಅವಕಾಶ ಕೊಟ್ಟ ಮೇಲೆ, ಇವರು ನಮ್ಮ ಉಪ ನಾಯಕರು ಮಾತನಾಡಬೇಕೋ ಬೇಡವೋ ಹೇಳಿ. ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ರಸಗೊಬ್ಬರದ ಬಗ್ಗೆ ಈಗಾಗಲೇ ದಾವಣಗೆರೆ, ಹಾವೇರಿಯಲ್ಲಿ ದಿನನಿತ್ಯ ಗಲಾಟೆಯಾಗುತ್ತಿರುವುದರ ಬಗ್ಗೆ ದಿನಪತ್ರಿಕೆಯಲ್ಲಿ ಇವತ್ತು ನೋಡಿದ್ದೇವೆ. ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಈ ವಿಚಾರದ ಬಗ್ಗೆ ನಿಯಮ 60ರ ಅಡಿಯಲ್ಲಿ ನಿಲುವಳಿ ಸೂಚನೆಯನ್ನು ತಂದಿದ್ದಾರೆ. ಈ ನಿಲುವಳಿ ಸೂಚನೆಯನ್ನು ಏಕೆ ಅಂಗೀಕಾರ ಮಾಡಬೇಕೆನ್ನುವ ಬಗ್ಗೆ ಕೂಡ ಹೇಳುತ್ತಿದ್ದಾರೆ. ಒಂದು ಸದನ ನಡೆಯುವಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೃಷಿ ಇಲಾಖೆಯ ಅಧಿಕಾರಗಳ ಒಂದು ಸಭೆ ಕರೆಯುತ್ತಾರೆ, ಆ ಸಭೆಯಲ್ಲಿ ಈ ರಾಜ್ಯದಲ್ಲಿ ಯಾವುದೇ ಗೊಬ್ಬರದ ಕೊರತೆ ಇಲ್ಲವೆಂದು ಹೇಳಿಕೆ ಕೊಟ್ಟಮೇಲೆ, ಸದನ ನಡೆಯುವಂತಹ ಸಂದರ್ಭದಲ್ಲಿ ಸದನದ ಹೊರಗಡೆ ಮಾನ್ಯ ಕೃಷಿ ಸಚಿವರು 20,000 ಟನ್ ಗೊಬ್ಬರ shortage ಇದೆಯೆಂದು ಹೇಳುತ್ತಾರಲ್ಲ, ಅವರು ಯಾವ basis ಮೇಲೆ ಹೇಳಿದರು? ಒಂದು ಕಡೆ ಮಾನ್ಯ ಮುಖ್ಯಮಂತ್ರಿಗಳು ರಾಜ್ಯದಲ್ಲಿ ಗೊಬ್ಬರದ ಕೊರತೆಯಿಲ್ಲವೆಂದು, ಇನ್ನೊಂದು ಕಡೆ ಕೃಷಿ ಸಚಿವರು 20,000 ಟನ್ ಗೊಬ್ಬರದ ಕೊರತೆ ಇದೆಯೆಂದು ಹೇಳುತ್ತಾರೆ. ಹಾಗಾದರೆ ಮಾನ್ಯ ಮುಖ್ಯಮಂತ್ರಿಗಳು ಹೇಳುವುದು ನಿಜವೇ? ಅಥವಾ ಕೃಷಿ ಮಂತ್ರಿಗಳು ಹೇಳುವುದು ನಿಜವೇ? ಈ ಸದನ ನಡೆಯುವಂತಹ ಸಂದರ್ಭದಲ್ಲಿ ಈ ರೀತಿಯ ಹೇಳಿಕೆ ಕೊಟ್ಟು, ಇವತ್ತು ಹಾವೇರಿ ಇರಬಹುದು, ದಾವಣಗೆರೆ ಇರಬಹುದು, ಸ್ವಂತ ಅವರ ಜಿಲ್ಲೆಯಲ್ಲೇ ಗೊಬ್ಬರದ ಕೊರತೆಯನ್ನು ನೀಗಿಸುವುದಕ್ಕೆ ಆಗದೇ ಕಳೆದ ಬಾರಿ ಎರಡು ಬಾರಿ ಗೋಲಿಬಾರ್ ಆಗಿ ಇಬ್ಬರು ಸತ್ತುಹೋದರು. ಇವತ್ತು ಲಾಠಿಚಾರ್ಜ್ ಎಲ್ಲಾ ಆಯಿತು. ಅಲ್ಲಿ ಅಧಿಕಾರಿಗಳು control ಮಾಡುವುದಕ್ಕಾಗುತ್ತಿಲ್ಲ. ಇವತ್ತು ಯಾವ್ಯಾವ ಸಮಯದಲ್ಲಿ ಎಷ್ಟೆಷ್ಟು ಗೊಬ್ಬರ ಬೇಕಾಗಿತ್ತು, ಈ ತಿಂಗಳು ಎಷ್ಟು ಬರಬೇಕು,

ಮುಂದಿನ ತಿಂಗಳೂ ಎಷ್ಟು ಬರಬೇಕು ಎಂದು ಅದನ್ನಾದರೂ ತಿಳಿದುಕೊಳ್ಳಬೇಕಲ್ಲವೇ? ಅದನ್ನು ಸರಿಯಾಗಿ ತಿಳಿದುಕೊಂಡು ಮಾನ್ಯ ಕೃಷಿ ಸಚಿವರಾದರೂ ಹೇಳಿಕೆ ಕೊಡಬೇಕು ಇಲ್ಲದಿದ್ದರೆ ಮಾನ್ಯ ಮುಖ್ಯಮಂತ್ರಿಗಳಾದರೂ ಹೇಳಿಕೆ ಕೊಡಬೇಕು, ಅದೂ ಇಲ್ಲ. ಹೋದ ಬಾರಿ ಮಾನ್ಯ ಮುಖ್ಯಮಂತ್ರಿಗಳು, ತೆಗೆದುಕೊಳ್ಳಿ ಇವತ್ತೆ Marketing Federationಗೆ 500 ಕೋಟಿ ರೂಪಾಯಿಯ ಚೆಕ್ ಕೊಟ್ಟು ಬಿಡುತ್ತೇನೆ, ನಾಳೆ ತರಿಸುತ್ತೀರೇನ್ರಿ ಎಂದು ಹೇಳಿದರು. ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದು ಸದನದ ರೆಕಾರ್ಡ್‌ನಲಿ ಇದೆ, ಅದನ್ನು ತೆಗೆಸಿ ನೋಡಿ. ಇವತ್ತು Marketing Federationಗೆ ಎಷ್ಟು ಹಣ ಕೊಟ್ಟಿದ್ದಾರೆ? ಎಷ್ಟು ಗೊಬ್ಬರ ತರಿಸಿದ್ದಾರೆ? ರೈತರಿಗೆ ಯಾವ್ಯಾವ ಗೊಬ್ಬರ ಕೊಟ್ಟಿದ್ದಾರೆ? ಇವತ್ತು ಉದಾಹರಣೆಗೆ ಹೇಳುವುದಾದರೆ ಮಂಗಳೂರಿನಲ್ಲಿ ಗೊಬ್ಬರದ ಕೊರತೆ ಇಲ್ಲ, ಮಂಗಳೂರಿಗೆ ಗೊಬ್ಬರ ಕಳಿಹಿಸುತ್ತೀರಿ. ಹಾವೇರಿನಲ್ಲಿ ಇವತ್ತು ಬೆಳೆ ಹಾಕಿದ್ದಾರೆ, ಅಲ್ಲಿ ಗೊಬ್ಬರ ಇಲ್ಲ. ದಾವಣಗೆರೆಗೆ ಗೊಬ್ಬರ ಬೇಕು, ಅಲ್ಲಿ ಇಲ್ಲ. ಎಲ್ಲಿದೆ ಗೊಬ್ಬರ? ಇದು ಒಂದು ದೊಡ್ಡ scandal ಇದೆ. ಏಕೆಂದರೆ ಒಂದು ಕಡೆ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆ ಕೊಡುತ್ತಾರೆ. ಇನ್ನೊಂದು ಕಡೆ ಕೃಷಿ ಸಚಿವರು 20,000 ಟನ್ shortage ಇದೆ ಎಂದು ಹೇಳುತ್ತಾರೆ. ಇಬ್ಬರಲ್ಲಿ ಯಾರದು ಹೇಳಿಕೆ ಸುಳ್ಳು ಎನ್ನುವುದನ್ನು ತಿಳಿದುಕೊಂಡು ಇಬ್ಬರಲ್ಲಿ ಒಬ್ಬರು ರಾಜೀನಾಮೆ ಕೊಡಬೇಕಾಗುತ್ತದೆ. ಕೃಷಿ ಸಚಿವರು ಹೇಳಿರುವುದು ತಪ್ಪಿದ್ದಲ್ಲಿ ಅವರು ರಾಜೀನಾಮೆ ಕೊಡಬೇಕಾಗುತ್ತದೆ, ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದು ತಪ್ಪಿದ್ದಲ್ಲಿ ಅವರು ರಾಜೀನಾಮೆ ಕೊಡಬೇಕಾಗುತ್ತದೆ. ನಾನು ಇರುವ ವಿಚಾರವನ್ನು ಇದ್ದಹಾಗೆ ಹೇಳುತ್ತಿದ್ದೇನೆ, ನನಗೇನು? ಈಗ ಯಾರ ಹೇಳಿಕೆ ನಿಜ? ಸದನ ನಡೆಯುವಾಗ ಇಬ್ಬರ ಹೇಳಿಕೆಯಲ್ಲಿ ಯಾರದ್ದು ನಿಜ ಎಂದು ಸಮರ್ಥನೆ ಮಾಡಿ ಹೇಳಬೇಕಾಗುತ್ತದೆ. ಯಾರು ತಪ್ಪು ಹೇಳಿದ್ದಾರೆ ಅವರು ರಾಜೀನಾಮೆ ಕೊಡಬೇಕಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ನಿಯಮ 60 ರಲ್ಲಿ ನಿಲುವಳಿ ಸೂಚನೆ ತಂದಿದ್ದಾರೆ, ಅದು ಸರಿಯಾಗಿದೆ, ಚರ್ಚೆ ಮಾಡುವುದಕ್ಕೆ ಇದಕ್ಕೆ ಅವಕಾಶ ಕೊಡಬೇಕು. ಇದರಲ್ಲಿ ರೈತರ ಅಳಿವು ಉಳಿವಿನ ಪ್ರಶ್ನೆ ಇದೆ. ನಮ್ಮ ರೈತರು ಇದ್ದರೆ ನಾವು ಇದ್ದ ಹಾಗೆ. ಅದಕ್ಕೋಸ್ಕರ ಅಧಿಕೃತವಾದಂತಹ ವಿರೋಧ ಪಕ್ಷದ ನಾಯಕರು ನಿಯಮ 60 ರಲ್ಲಿ ಇಲ್ಲಿ ನಿಲುವಳಿ ಸೂಚನೆ ತಂದಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ರೈತರ ಹೆಸರಿನಲ್ಲಿ ಪ್ರಮಾಣ ವಚನವನ್ನು ಸ್ವೀಕರಿಸಿದ್ದಾರೆ. ಆದ್ದರಿಂದ ಇದು ನಿಯಮ 69 ಬೇಡ, ಇದನ್ನು ನಿಯಮ 60ರಡಿಯಲ್ಲಿ ನಿಲುವಳಿ ಸೂಚನೆಯಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕು.

ಶ್ರೀ ಬಂಡೆಪ್ಪ ಕಾಶಂಪೂರ್: ಮಾನ್ಯ ಅಧ್ಯಕ್ಷರೇ, ಹೋದ ವರ್ಷ ಹಾವೇರಿಯಲ್ಲಿ ಗಲಾಟೆಯಾದ ಮೇಲೆ ಇಲ್ಲಿ ಚರ್ಚೆಗೆ ಬಂದಾಗ ನಾನು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೆನು. ಹಿಂದೆ Governor ರವರ ಆಡಳಿತ ಇದ್ದಾಗ, ಗೊಬ್ಬರಕ್ಕೆ

ಮೊದಲೇ ಸಿದ್ಧತೆ ಮಾಡಿ ಕೊಳ್ಳಬೇಕಾಗಿತ್ತು ಎಂದು ಹೇಳಿದಾಗ ಈ ಕಡೆಯಿದ್ದವರೆಲ್ಲರೂ table ತಟ್ಟಿದರು. ಅವರು ನಾವು ಹೊಸದಾಗಿ ಬಂದಿದ್ದೇವೆ, ಇದಕ್ಕೆ Governor periodನಲ್ಲಿ ಸಿದ್ಧತೆ ಮಾಡಿಕೊಳ್ಳಬೇಕಾಗಿತ್ತೆಂದು ಅಭಿಪ್ರಾಯ ಇತ್ತು. ಆದರೆ ಈಗ ಆಡಳಿತಕ್ಕೆ ಬಂದು ಒಂದು ವರ್ಷ ಪೂರ್ತಿಯಾಗಿ, experience ಆಗಿದ್ದರೂ ಕೂಡ ಇವತ್ತು ನಮ್ಮ ರಾಜ್ಯದಲ್ಲಿ ಅದೇ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ, ತಮಗೆ ನಾನು ಒಂದು ಮಾತನ್ನು ಹೇಳುತ್ತೇನೆ, ನಾನು ಕೃಷಿ ಸಚಿವನಿದ್ದಾಗ ಕೇಂದ್ರದ 2–3 ಸಭೆಯಲ್ಲಿ ಈ ರೀತಿ ಕೊರತೆ ಬರಬಹುದು, ತಾವು ರಾಜ್ಯಸರ್ಕಾರದಿಂದ buffer stock ಇಡುವುದರಿಂದ ಬೇರೆ ವ್ಯವಸ್ಥೆ ಮಾಡಿಕೊಳ್ಳಿ, ಆಮೇಲೆ ನಾವು ದುಡ್ಡು ಕೊಡುತ್ತೇವೆ ಎಂದು ಹೇಳುವ ನಿಟ್ಟಿನಲ್ಲಿ ನಾವಿದ್ದಾಗಲೇ ಮೀಟಿಂಗ್ ಆಗಿತ್ತು. ನಾವಿದ್ದಾಗ ಮೊದಲಿಗೆ Marketing Federationಗೆ ದುಡ್ಡು ಕೊಟ್ಟು, buffer stock ತರಿಸುವಂತಹ ವ್ಯವಸ್ಥೆ ಮಾಡಿದ್ದೆವು. ಆದರೆ ಅಂದು ಮಾನ್ಯ ಮುಖ್ಯಮಂತ್ರಿಗಳು, ಇಲ್ಲ ನಾವೂ ರೆಡಿಯಾಗಿದ್ದೇವೆ, 500 ಕೋಟಿ ರೂಪಾಯಿ ಚೆಕ್ ಅನ್ನು ವಿರೋಧ ಪಕ್ಷದವರಿಗೆ ಕೊಟ್ಟುಬಿಡುತ್ತೇವೆ, ನೀವು ತರಿಸಿರಿ ಎನ್ನುವ ಧಾಟಿಯಲ್ಲಿ ಮಾತನಾಡಿದರು. ಆದರೆ ನಂತರ ಅವರೇ Marketing Federationಗೆ 125 ಕೋಟಿ ರೂಪಾಯಿಯನ್ನು ಕೊಡುತ್ತಿದ್ದೇವೆ, ಅದರಲ್ಲಿ 25 ಕೋಟಿ ರೂಪಾಯಿ ನಮ್ಮಿಂದ, 100 ಕೋಟಿ ರೂಪಾಯಿ ಸಾಲ ಎಂದು ಹೇಳಿದ್ದನ್ನು ನಾವು ಪತ್ರಿಕೆಯಲ್ಲಿ ನೋಡಿದೆವು. ಆದರೆ ಇವತ್ತು ದೊಡ್ಡ ಪ್ರಮಾಣದಲ್ಲಿ ಗೊಬ್ಬರ ಕೊರತೆಯಾಗಿ ರೈತರು ಸಂಕಷ್ಟದಲ್ಲಿ ಸಿಲುಕಿ, ಗೋಲಿಬಾರ್ ಆಗಿ ಒಂದು ವರ್ಷವಾದರೂ ಕೂಡ ಸರ್ಕಾರ ಏನು ಮಾಡಿದೆ ಎಂದು ನಾವು ಯೋಚನೆ ಮಾಡಬೇಕಾಗುತ್ತದೆ. ಇನ್ನೊಂದು ಎಲ್ಲಕ್ಕಿಂತ ಮುಖ್ಯವಾದಂಥ ವಿಚಾರವೆನೆಂದರೆ ಈ ರೀತಿ ಗೊಬ್ಬರ shortage ಆಗುತ್ತಿದೆಯೆಂದು ಸಾವಯವ ಕೃಷಿಯಲ್ಲಿ 500 ಕೋಟಿ ರೂಪಾಯಿಗಳ ಒಂದು ಮಿಷನ್ ಮಾಡಿ, ಅದಕ್ಕೆ ಒಬ್ಬ ಕ್ಯಾಬಿನೆಟ್ ಮಂತ್ರಿಯನ್ನು ಮಾಡಿ, ಇದರಲ್ಲಿ ಯಾವ್ಯಾವ ಕಾರ್ಯಕರ್ತರಿಗೆ ದುಡ್ಡು ಕೊಟ್ಟಿದ್ದಾರೋ ಗೊತ್ತಿಲ್ಲ. ಇಲ್ಲಿ ಅಷ್ಟು ದುಡ್ಡು ಪೋಲ್ ಅದರೂ ಕೂಡ ಇವತ್ತಿನ ದಿವಸ ರೈತರಿಗೆ ಗೊಬ್ಬರ ಸಿಗುತ್ತಿಲ್ಲ, ಇವತ್ತು ಈ subject ಬಗ್ಗೆ ಚಿಂತನೆ ಮಾಡಬೇಕಾಗಿದೆ. ಹಾಗಾಗಿ ಈ ಸಮಯದಲ್ಲಿ ಸರ್ಕಾರವೂ ಹಿಂದೆ ಯಾವ ರೀತಿಯಲ್ಲಿ ಸಿದ್ಧತೆಗಳನ್ನು ಮಾಡಿಕೊಂಡಿದ್ದರು. ಇವತ್ತು ನಮ್ಮ ಭಾಗದಲ್ಲಿ ಬೀದರ್, ಔರಾದ್ ಕಡೆಗಳಲ್ಲಿ ಇನ್ನೂ 60% ಬಿತ್ತನೆ ಕಾರ್ಯವಾಗಿಲ್ಲ. ಹೀಗಿರುವಲ್ಲಿ ಎಲ್ಲಾ ಕಡೆಗಳಲ್ಲೂ ಪೂರ್ತಿ ಬಿತ್ತನೆಯಾಗಿದ್ದರೆ ಇವತ್ತು ಎಷ್ಟು ತೊಂದರೆಯಾಗುತ್ತಿತ್ತೋ ಗೊತ್ತಿಲ್ಲ. ಇಂಥ ಒಂದು ಸಂದರ್ಭದಲ್ಲಿ ಇವರು ಯಾವ ನಿಟ್ಟಿನಲ್ಲಿ ಯೋಜನೆಗಳನ್ನು ಮಾಡಿಕೊಂಡಿದ್ದಾರೆಂಬ ವಿಚಾರವನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

ಶ್ರೀ ಎಸ್.ಸುರೇಶ್ ಕುಮಾರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ವಿರೋಧಪಕ್ಷದ ನಾಯಕರು ನಿಯಮ 60 ಅಡಿಯಲ್ಲಿ ರಸಗೊಬ್ಬರದ ಕೊರತೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದು ಸಾರ್ವಜನಿಕ ಮಹತ್ವ ವಿಚಾರವಾಗಿದೆ. ಇದನ್ನು ನಿಯಮ 60 ಅಡಿಯಲ್ಲಿ ನಿಲುವಳಿ ಸೂಚನೆಯಾಗಿ ಪರಿಗಣನೆ ಮಾಡಬೇಕೆಂಬ ಪ್ರಸ್ತಾವನೆಯನ್ನು ಕೊಟ್ಟಿದ್ದಾರೆ. ನಾನು I don't want to go to the merits of the case. Procedure ಅನ್ನು ಮಾತ್ರ ನಾನು ಮಾನ್ಯ ಸಭಾಧ್ಯಕ್ಷರ ಗಮನಕ್ಕೆ ತರಬಯಸುತ್ತೇನೆ. ಇವತ್ತೇ, ನಿಯಮ 69ರ ಮೇರೆಗೆ, ಕಾರ್ಯದರ್ಶಿಯವರ ವರದಿ ಮಂಡಿಸಿದ ತಕ್ಷಣವೇ ಮೈಸೂರಿನಲ್ಲಿ ನಡೆದಿರುವ ಪ್ರಕರಣ ಏನು ಇದೆ. ಅದರ ಬಗ್ಗೆ ಚರ್ಚೆಯೆಂದು ಇವತ್ತಿನ ಅಜೆಂಡಾದಲ್ಲಿ ಇದೆ. ಮಾನ್ಯ ಸಭಾಧ್ಯಕ್ಷರೆ, ನಾನು ತಮ್ಮ ಗಮನ ಸೆಳೆಯ ಬಯಸುವುದೇನೆಂದರೆ, ನಮ್ಮಲ್ಲಿ ಏನು precedent ಇದೆ. ನಮ್ಮಲ್ಲಿ ಹಿಂದಿನ ನಿದರ್ಶನಗಳು ಇವೆ, ಹಿಂದಿನ ರೂಲಿಂಗ್‌ಗಳು ಏನಿವೆ, ಅವುಗಳ ಬಗ್ಗೆ ತಮ್ಮ ಗಮನವನ್ನು ಸೆಳೆಯಲಿಚ್ಛಿಸುತೇನೆ. Adjournment Motion not to be resorted, to when there are other means of ventilating grievances. On 20th December 1956 the Hon'ble Member Sri Mulka Govinda Reddy gave notice of an adjournment motion to discuss the soring price of the food grains in Mysore State. On that day the motion of thanks also was to be discussed. When the Hon'ble Member sought the permission of the Hon'ble Speaker to move his adjournment motion the Hon'ble Speaker gave the following ruling:- There are other avenues open to the Member to ventilate his grievances, the Hon'ble member can ventilate his grievances just now on the motion of thanks. When there are other means of ventilating the grievances, it is no use resorting to an extra ordinary procedure as an adjournment motion ಎಂದು ಸ್ಪೀಕರ್‌ರವರು ಒಂದು ರೂಲಿಂಗ್ ಕೊಟ್ಟಿರುವಂಥಾದ್ದು ಇದೆ. ಇವತ್ತೆ ನಮ್ಮ ಸದನದಲ್ಲಿ ವಿತ್ತೀಯ ಕಾರ್ಯಕಲಾಪಗಳ ಅಡಿಯಲ್ಲಿ ಮೊದಲನೇ ಬೇಡಿಕೆ ಇರುವಂಥಾದ್ದೆ ಕೃಷಿ ಮತ್ತು ತೋಟಗಾರಿಕೆಯ ಮೇಲೆ ಚರ್ಚೆ. ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವಂಥದ್ದು ಏನೆಂದರೆ, ಇವತ್ತು ಮಹತ್ವದ ವಿಚಾರವಾದ ರಸಗೊಬ್ಬರದ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ. ಅದು ಕೃಷಿಗೆ ಸಂಬಂಧಪಟ್ಟ ಹಾಗೆ ಇಷ್ಟು percentage ಬಿತ್ತನೆಯಾಗಿದೆ, ಆತಂಕವಾಗಿದೆ. ಅದನ್ನು ಈ ವಿತ್ತೀಯ ಕಾರ್ಯ ಕಲಾಪಗಳ ಅಡಿಯಲ್ಲಿ ಕೃಷಿ ಮತ್ತು ತೋಟಗಾರಿಕೆಯಲ್ಲಿ ತೆಗೆದುಕೊಳ್ಳುವುದಕ್ಕೆ ಮಾನ್ಯ ಪ್ರತಿಪಕ್ಷದ ನಾಯಕರುಗಳಿಗೆ ಮತ್ತು ನಮ್ಮ ಸದಸ್ಯರಿಗೆ ಅವಕಾಶವಿದೆ. ಈ ಮಹತ್ತರವಾದ ವಿಚಾರವನ್ನು ಇದರಲ್ಲಿ ತೆಗೆದುಕೊಳ್ಳಬೇಕೇ ಹೊರತು ಮತ್ತೊಂದು adjourn motion ತಂದು ಅದರಲ್ಲಿ ತೆಗೆದುಕೊಳ್ಳುವುದಕ್ಕೆ

ಅವಕಾಶವಿಲ್ಲವೆಂಬ ವಿಚಾರ ತಮ್ಮ ಪೀಠದಿಂದ ಕೊಟ್ಟಿರುವ ರೂಲಿಂಗ್ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಕಾನೂನು ಸಚಿವರು ಇಲ್ಲಿರುವಂಥ ruling cite ಮಾಡಿರುವಂಥದ್ದಕ್ಕೂ ನಾವು ತಂದಿರುವಂಥ motionಗೂ ಸಂಬಂಧವಿಲ್ಲ. ಆವರು motion of thanks ಮೇಲೆ ಇಲ್ಲಿ ಚರ್ಚೆ ಆಗಬೇಕಾಗಿದೆ. Governor's Address ಇತ್ತು. ಅದರ ಮೇಲೆ ಚರ್ಚೆಯಾಗಬೇಕಾಗಿತ್ತು. ಅದರ ಮೇಲೆ ಚರ್ಚೆಯಾಗುವಾಗ ಈ ರೀತಿಯ ರೂಲಿಂಗ್ ಬಂದಿದೆ. ಹಿಂದೆ ಶ್ರೀ ಮುಲ್ಕಾ ಗೋವಿಂದ ರೆಡ್ಡಿ ಯವರು ತಂದಿರುವಂಥದ್ದು ಬಹಳ important matter. ನೀವು ಈಗ ಡಿಮ್ಯಾಂಡ್ಸ್ ಮೇಲೆ ಚರ್ಚೆ ಇದೆಯೆಂದು ಹೇಳುತ್ತಿರುವಂಥದ್ದು. ಆದರೆ ಇವತ್ತು ರಾಜ್ಯದಲ್ಲಿ ಎಲ್ಲಾ ಕಡೆಗಳಲ್ಲೂ ರಸ್ತೆ ಚಳುವಳಿ ಮಾಡುತ್ತಿದ್ದಾರೆ. ಅವರು ಗೊಬ್ಬರವಿಲ್ಲವೆಂದು ಹಾಹಾಕಾರ ಮಾಡುತ್ತಿದ್ದಾರೆ. ಇವತ್ತು ನೀವು ಬಿತ್ತನೆಗೆ ಗೊಬ್ಬರ ಕೊಡದಿದ್ದರೆ, ಅಲ್ಲಿ ರೈತರಿಗೆ ಕಷ್ಟ ಎಷ್ಟಾಗುತ್ತದೆ? ಪರಿಸ್ಥಿತಿ ಏನು? ಎರಡನೆಯದಾಗಿ ಗೊಬ್ಬರವಿದ್ದರೂ ಕೂಡ ಕೇಂದ್ರ ಸರ್ಕಾರ ಕೊಟ್ಟಿದ್ದರೂ ಕೂಡ, ಮಾನ್ಯ ಮುಖ್ಯಮಂತ್ರಿಯವರು ಹೊರಗಡೆ statement ಕೊಟ್ಟಿದ್ದಾರೆ. ರಸಗೊಬ್ಬರದ ಅಭಾವಕ್ಕೆ ಕೇಂದ್ರ ಸರ್ಕಾರವೇ ಕಾರಣವೆಂದು ಹೇಳಿದ್ದಾರೆ. ಈ ರೀತಿಯ ಒಂದು ಸನ್ನಿವೇಶ ಉದ್ಭವವಾಗಿರುವಾಗ ನಾವು ಇದನ್ನು ಯಾವ ರೂಪದಲ್ಲಿ ಚರ್ಚೆ ಮಾಡಬೇಕಾಗುತ್ತದೆ? ನಾವು ಡಿಮಾಂಡ್ಸ್ ಮೇಲೆ ಚರ್ಚೆ ಮಾಡುವಾಗ ಮಾಡಬೇಕಾ? It is a serious urgent matter with public interest, farmer's interest is involved ಅದುದರಿಂದ ಈ ವಿಷಯವನ್ನು urgent ಆಗಿ ಪ್ರಸ್ತಾಪ ಮಾಡಬೇಕು. ಸರ್ಕಾರ ಇದರ ಬಗ್ಗೆ ತನ್ನ ನಿಲುವನ್ನು ಸ್ಪಷ್ಟಪಡಿಸಬೇಕು. ಅದು ಬಿಟ್ಟು, ಇದು urgent matter ಇದ್ದರೂ ಕೂಡ, ಇವತ್ತು ಇಡೀ ರಾಜ್ಯದಲ್ಲಿ ರೈತರ ಹಾಹಾಕಾರ ಇದ್ದರೂ ಕೂಡ, ತೊಂದರೆಯಾಗಿದ್ದರೂ ಕೂಡ, ಗೊಬ್ಬರದ ಸಮಸ್ಯೆ ನಿರ್ಮಾಣವಾಗಿದ್ದರೂ ಕೂಡ, ನಾವು ಈ ರೀತಿ ಪ್ರಸ್ತಾಪ ತರಬಾರದು, ಇದು orderನಲ್ಲಿ ಇಲ್ಲ, ಇದನ್ನು ಡಿಮಾಂಡ್ಸ್ ಮೇಲೆ ಚರ್ಚೆ ಮಾಡಬಹುದು, ಇದನ್ನು ಮಾಡುವುದಕ್ಕೆ ಆಗುವುದಿಲ್ಲವೆನ್ನುವುದು ಸರಿಯಲ್ಲ. ಅವರು ಹೇಳಿರುವಂಥದ್ದು ಸರಿಯಿಲ್ಲ, ದಯಮಾಡಿ ತಾವು ಈ ವಿಷಯದ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. It is very important and serious matter ಜನರು ನಿನ್ನೆಯೂ ಕೂಡ ಬೀದಿಗಿಳಿದು ಪ್ರತಿಭಟನೆ ಮಾಡಿದ್ದಾರೆ. ರಾಣಿಬೆನ್ನೂರಿನಲ್ಲಿ ರಸ್ತೆ ತಡೆ ಮಾಡಿದ್ದಾರೆ, ಕುಣಿಗಲ್‌ನಲ್ಲಿ ಮಾಡಿದ್ದಾರೆ, ಹರಿಹರದಲ್ಲಿ ಮಾಡಿದ್ದಾರೆ. ಇವತ್ತು ಚಳುವಳಿ ನಡೆಯುತ್ತಿದೆ, ಪರಿಸ್ಥಿತಿ ಹೀಗೆ ಇರುವಾಗ ನೀವು ಈ ವಿಷಯವನ್ನು ಡಿಮಾಂಡ್ ಮೇಲೆ ಚರ್ಚೆ ಮಾಡುವಾಗ ಹೇಳಿ, ಇದನ್ನು ರೈಸ್

ಮಾಡಬೇಡಿಯೆಂದು It is not coming within the perview of rule 60, ಇದು Rule 60ನಲ್ಲಿ ಬರುವುದಿಲ್ಲವೆಂದು ಹೇಳುವಂಥದ್ದು ಸರಿಯಲ್ಲ. It is not tenable. Whatever objection is taken, it is not tenable.

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ನಾನು ಯಾವುದೇ ಕಾರಣಕ್ಕೂ ಪ್ರತಿಪಕ್ಷದ ನಾಯಕರು ತಂದಿರುವಂಥ ವಿಚಾರದ ಮಹತ್ವವನ್ನು ಕಡಿಮೆ ಮಾಡುತ್ತಿಲ್ಲ. Please, let it go on record. ಇದು ಸರಿಯಾದ ರೀತಿಯಲ್ಲಿ ಹೋಗಬೇಕು. ಇದರ ಮಹತ್ವ ಯಾವುದೇ ರೀತಿಯಲ್ಲೂ ಕಡಿಮೆ ಮಾಡುತ್ತಿಲ್ಲ. ಇದು ಬಹಳ ಮಹತ್ವವಾದ ವಿಚಾರವಾಗಿದ್ದು, ಇದು ಚರ್ಚೆಯಾಗಬೇಕು. ಅದರೆ ಸದನದ ಜವಾಬ್ದಾರಿ ಇದೆ, ಒಂದು procedure ಹೇಗೆ ಇರಬೇಕೆಂದು ಇದೆ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದನ್ನು ತಮ್ಮ ಗಮನಕ್ಕೆ ತರುವಂಥದ್ದೆ ತಪ್ಪು ಎಂದು ಹೇಳಿ ಬಿಟ್ಟರೆ, ನಾನು ಅದರ ಮಹತ್ವವನ್ನು ಕಡಿಮೆ ಮಾಡಿದ್ದಾರೆ, that is not fair on your part. ಅದಕ್ಕೋಸ್ಕರ ದಯವಿಟ್ಟು ರೂಲಿಂಗ್ ವಿಚಾರವನ್ನು ತಮ್ಮ ಗಮನಕ್ಕೆ ತಂದಿದ್ದೇನೆ.

ಶ್ರೀ ಸಿದ್ಧರಾಮಯ್ಯ: ನಿಯಮ 61ರಲ್ಲಿ ಏನು ಹೇಳುತ್ತಾರೆ. ಅದರಲ್ಲಿ ಕೆಲವು requirements fullfill ಮಾಡಬೇಕು. ಇವೆಲ್ಲವನ್ನು fulfil ಮಾಡಿದ್ದೇವೆ. ಇದಲ್ಲಾ ಆಗಿದ್ದರೂ ಕೂಡ ಇದು ಜರೂರು ಮಹತ್ವವಾದ ವಿಚಾರವಲ್ಲ, ಚೆನ್ನಾಗಿಲ್ಲ, procedure ಇದೆ ಎನ್ನುವಂಥದ್ದು it is not correct. ಆ ಕಾರಣದಿಂದ ಇದು ಸರಿಯಾಗಿದೆ. ಇದು ನಿಯಮ 60ರ ವ್ಯಾಪ್ತಿಯಲ್ಲಿ ಬರುತ್ತದೆ. ದಯಮಾಡಿ ಈ ವಿಷಯ ರೈತರ ಸಮಸ್ಯೆಯಾಗಿರುವುದರಿಂದ ಚರ್ಚೆ ಮಾಟುವುದಕ್ಕೆ ಅವಕಾಶ ಮಾಡಿಕೊಡಬೇಕು. ಈ ಸರ್ಕಾರ ಯಾವಾಗಲೂ ನಮ್ಮದು ರೈತರ ಸರ್ಕಾರ, ನಾವು ರೈತರಿಗೋಸ್ಕರವೇ ಇರುವುದೆಂದು ಹೇಳುತ್ತದೆ. ಈಗ ಇಂಥ ತೀವ್ರವಾದಂಥ ಸಮಸ್ಯೆ ಇರುವಾಗ ನೀವು ಇಲ್ಲ ಇದನ್ನು ಬೇಡಿಕೆಗಳ ಮೇಲೆ ಚರ್ಚೆ ಮಾಡಿಯೆಂದು ಹೇಳುವಂಥದ್ದು. This objection is not at all tenable.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, ...

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಮತ್ತೆ ಎಲ್ಲಾ second round ಮಾತನಾಡುವುದಕ್ಕೆ start ಆಗುತ್ತದೆ.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, ತಾವು ನಮಗೆ ಬುದ್ಧಿವಾದ ಹೇಳುತ್ತಿದ್ದೀರಿ. ನಾವು ಕೇಳಿದ ಮೇಲೆ ಅದಕ್ಕೆ ನಾವು ಉತ್ತರವನ್ನು ಹೇಳಬೇಕೋ, ಬೇಡವೋ? ನಮಗೂ ಬುದ್ಧಿ ಇದೆ ಎಂದು ತೋರಿಸಿಕೊಳ್ಳಬೇಕೋ, ಬೇಡವೋ? ನಾನು ಹೇಳುವುದೇನೆಂದರೆ adjournment motion ಅನ್ನು ತೆಗೆದುಕೊಳ್ಳಬೇಕಾದಂಥ ಸಮಯದಲ್ಲಿ ಪ್ರಶ್ನೋತ್ತರ ಕಾಲವನ್ನು ಬದಿಗಿಟ್ಟು ತೆಗೆದುಕೊಡಿರುವಂಥ ಸಂಪ್ರದಾಯವಿದೆ. ಅದರೆ adjournment motion ಅನ್ನು ಏಕೆ

ತೆಗೆದುಕೊಳ್ಳಬೇಕೆಂದು ಅದಾಗ ಇದರ ವಿಚಾರದಲ್ಲಿ ಏನಾಗಿದೆಯೆಂದರೆ ಗೊಬ್ಬರದ ವಿಚಾರವನ್ನು ತೆಗೆದುಕೊಂಡಿದ್ದೇವೆ. ಇದರಲ್ಲಿ ರಾಜ್ಯ ಸರ್ಕಾರವಷ್ಟೇ ಅಲ್ಲ ಕೇಂದ್ರ ಸರ್ಕಾರವೂ ಕೂಡ involve ಆಗಿವೆ. adjournment motion ನಲ್ಲಿ ಚರ್ಚೆ ಮಾಡಿದಂಥ ಸಂದರ್ಭದಲ್ಲಿ ಆ ವಿಷಯಕ್ಕೆ ಹೆಚ್ಚಿನ ಘನತೆ ಮತ್ತು ಮಹತ್ವ ಬರುತ್ತದೆ, ಮತ್ತೆ ರಾಷ್ಟ್ರದಲ್ಲಿರುವಂಥ ಎಲ್ಲಾ ಪತ್ರಿಕೆಗಳಲ್ಲೂ ಪ್ರಸ್ತಾಪವಾಗುವಂಥದ್ದು ಮತ್ತು ಕೇಂದ್ರ ಸರ್ಕಾರದಲ್ಲೂ ಕೂಡ ಇವತ್ತು ಅಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. ಅಲ್ಲಿ adjournment motion ಮೇಲೆ ಚರ್ಚೆ ಮಾಡುತ್ತಿದ್ದಾರೆಂಬುದು ಮಹತ್ವವಾದ ವಿಚಾರವಾಗುತ್ತದೆ. ಕೇಂದ್ರ ಸರ್ಕಾರ ಮತ್ತು ಮಹತ್ವವನ್ನು priorities ಮಾಡಬೇಕೆಂದು ಅದಾಗ ಹೆಚ್ಚಿನ ಒತ್ತು ಕೊಟ್ಟಿದೆಯೆಂಬ ಸಂದೇಶ ದೇಶಕ್ಕೆ ರವಾನೆಯಾಗುತ್ತದೆ ಮತ್ತು ರೈತರಿಗೆ ರವಾನೆಯಾಗುತ್ತದೆ. ನಾನು ಒಂದು ಮಾತು ಹೇಳುವುದೇನೆಂದರೆ ತಾವು ರೈತರ ಮುಖ್ಯಮಂತ್ರಿಗಳು, ಇದು ರೈತರ ಸರ್ಕಾರ, ದಯಮಾಡಿ ನೀವು ಗೊಬ್ಬರದ ವಿಚಾರ ಬಂದಾಗ, ನಾನು ಏನು ಹೇಳುತ್ತೇನೆಂದರೆ ಕಳೆದ ವರ್ಷ ಗಾಯವಾಗಿದೆ. ಆ ಗಾಯವನ್ನು ವಾಸಿ ಮಾಡಬೇಕೆಂದರೆ ನೀವು ಉದಾರತ್ವವನ್ನು ತೋರಿಸಿ. ಇವತ್ತು ಈ ವಿಷಯ adjournment motion ನಲ್ಲಿ ಚರ್ಚೆಯಾಗಲಿ, ಅದರ ಜೊತೆಗೆ ಇದು ದೇಶಕ್ಕೆ ಗೊತ್ತಾಗಲಿ. ಕೇಂದ್ರ ಸರ್ಕಾರದ ಬಗ್ಗೆ ಕೂಡ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಾಗುತ್ತದೆ. ಅದಕ್ಕೆ ಹೆಚ್ಚು ಮಹತ್ವ ಬರಲಿ ಕಾರಣಕ್ಕೆ ಇದು ಇದೆಯೇ ವಿನಃ ಬೇರೆ ಇನ್ನು ಯಾವ ಕಾರಣಕ್ಕೂ ಅಲ್ಲವೆನ್ನುವಂಥದ್ದನ್ನು ತಾವು ಅರ್ಥಮಾಡಿಕೊಳ್ಳಬೇಕು. ನಮಗೆ ಡಿಮಾಂಡ್ಸ್ ಮಂಡನೆಯಾಗಿದೆಯೆಂಬುದು ಗೊತ್ತಿದೆ. ಅದರೆ ಡಿಮಾಂಡ್ಸ್ ಮೇಲೆ ಚರ್ಚೆಯಾದಾಗ ಎಷ್ಟು ಮಹತ್ವ ಬರುತ್ತದೆಂಬುದು ಗೊತ್ತಿದೆ. ಅದರೆ ಇದನ್ನು ನಿಲುವಳಿ ಸೂಚನೆಯನ್ನು ಪ್ರಸ್ತಾಪ ಮಾಡಿದಾಗ ಅದಕ್ಕೆ ಸಿಗುವ ತೂಕ ಬೇರೆಯದರಲ್ಲಿ ಸಿಗುವುದಿಲ್ಲವೆಂಬ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಕಾನೂನು ಸಚಿವರು..

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ನಾನು ರೂಲಿಂಗ್ ಕೊಡುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ: ನಾನು ಎರಡು ನಿಮಿಷಗಳಲ್ಲಿ ಮುಗಿಸುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ: ಒಂದೆರಡು ನಿಮಿಷಗಳಲ್ಲಿ ಮುಗಿಸುತ್ತೇನೆ. ಇವತ್ತು ಅನುದಾನ ಬೇಡಿಕೆಗಳ ಮೇಲಿನ ಚರ್ಚೆಯಿದ್ದು, ಅದರಲ್ಲಿ ಕೃಷಿ ಇಲಾಖೆಯ ಬೇಡಿಕೆ ಮೊದಲನೇ ಸಬ್ಜೆಕ್ಟ್ ಇದ್ದು, ಕೃಷಿ ಇಲಾಖೆಯ ಬೇಡಿಕೆಯ ಮೇಲೆ ಮಾತನಾಡುವಾಗ ಈ ವಿಷಯವನ್ನು ಮಾತನಾಡಲಿ ಎನ್ನುವ ಒಂದು ಪ್ರಸ್ತಾವನೆಯನ್ನು ಕಾನೂನು ಸಚಿವರು ತಮ್ಮ ಮುಂದೆ ಇಟ್ಟು, ರೂಲ್ 60 ರಲ್ಲಿ ಇದನ್ನು ತೆಗೆದುಕೊಳ್ಳುವುದು ಸರಿಯಿಲ್ಲ ಎನ್ನುವ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಇದರಲ್ಲಿ ಏನು ವಿಷಯ ಅಡಗಿದೆ ಎನ್ನುವುದನ್ನು ಕಾನೂನು ಸಚಿವರು ಅರ್ಥಮಾಡಿಕೊಳ್ಳಬೇಕು. ಒಂದು ಕಡೆ ಅವರು ತಮಗೆ ರೈತರ ಬಗ್ಗೆ ಕಾಳಜಿ ಇದೆ ಎಂದು ಹೇಳುತ್ತಾರೆ. ಮುಖ್ಯಮಂತ್ರಿಗಳಿಗೆ

ಕಾಳಜಿ ಇದೆ. ಅವರು ಪ್ರಮಾಣ ವಚನವನ್ನು ತೆಗೆದುಕೊಳ್ಳಬೇಕಾದರೆ ರೈತರ ಹೆಸರಿನಲ್ಲಿ ತೆಗೆದುಕೊಂಡಿದ್ದಾರೆ. ಇವತ್ತು ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದವರ ಮೇಲೆ ಹೇಳುತ್ತಿದ್ದಾರೆ. ಈ ವಿಷಯದಲ್ಲಿ ಕಳೆದ ಸಾರಿ ಏನಾಯಿತು? ಹೊಸ ಸರ್ಕಾರ ಬಂತು, ಹಾಗಾಗಿ ಮಾಡುವುದಕ್ಕಾಗಲಿಲ್ಲ ಎನ್ನುವುದನ್ನು ಒಪ್ಪಿಕೊಳ್ಳೋಣ. ಈಗ ಸರ್ಕಾರ ಬಂದು ಒಂದು ವರ್ಷವಾಗಿದೆ. ಒಂದು ವರ್ಷದಲ್ಲಿ ಈ ಸರ್ಕಾರ ಏನು ಮಾಡುತ್ತಿದೆ? ಇದರ ಬಗ್ಗೆ ಏನು ಚಿಂತನೆಯನ್ನು ಮಾಡಿದೆ? ಇದೆಲ್ಲವನ್ನು ನಾವು ಕೃಷಿ ಇಲಾಖೆಯ ಬೇಡಿಕೆಯಲ್ಲಿ ಮಾತನಾಡುವುದಕ್ಕೆ ಆಗುತ್ತದೆಯೇ? ಇವರು ಕೇಂದ್ರ ಸರ್ಕಾರದ ಮೇಲೆ ಹೇಳುತ್ತಾರೆ. ಮುಖ್ಯಮಂತ್ರಿಗಳು ಒಂದು ಕಡೆ, ನಮ್ಮಲ್ಲಿ ಗೊಬ್ಬರ ಇದೆ, ಗೊಬ್ಬರದ ಕೊರತೆ ಇಲ್ಲ ಎಂದು ಹೇಳುತ್ತಾರೆ. ಇನ್ನೊಂದು ಕಡೆ ಕೃಷಿ ಸಚಿವರು 20 ಸಾವಿರ ಟನ್ ಗೊಬ್ಬರ ಇದೆ ಎಂದು ಹೇಳುತ್ತಾರೆ. ಈ ವಿಷಯವನ್ನು ನಾವು ಕೃಷಿ ಇಲಾಖೆಯ ಬೇಡಿಕೆಯಲ್ಲಿ ಚರ್ಚೆ ಮಾಡುವುದಕ್ಕಾಗುತ್ತದೆಯೇ? ಇದು ಅತಿ ಗಂಭೀರವಾದಂಥ ವಿಷಯ. ಮಾನ್ಯ ವಿರೋಧ ಪಕ್ಷದ ನಾಯಕರು ಏನು ತಂದಿದ್ದಾರೆ, ದಯಮಾಡಿ ಕಾನೂನು ಸಚಿವರು ಇದನ್ನು ಚರ್ಚೆಗೆ ಒಪ್ಪಿಕೊಳ್ಳಬೇಕಾಗುತ್ತದೆ. ಈ ಸರ್ಕಾರಕ್ಕೆ ರೈತರ ಬಗ್ಗೆ ಕಾಳಜಿ ಇದ್ದರೆ, ಇದನ್ನು ಕೂಡಲೇ ಒಪ್ಪಿಕೊಳ್ಳಬೇಕಾಗುತ್ತದೆ. ಇದಕ್ಕೆ ಒಂದು ಗಂಟೆಯಲ್ಲ, ಒಂದು ದಿವಸ ಬೇಕಾದರೂ ರೂಲ್ 60 ಅಡಿಯಲ್ಲಿ ನಿಲುವಳಿ ಸೂಚನೆಯಲ್ಲಿ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ನಾನು ಮಾನ್ಯ ಸಭಾಧ್ಯಕ್ಷರಲ್ಲಿ ವಿನಂತಿ ಮಾಡುತ್ತೇನೆ.

5. ಸಭಾಧ್ಯಕ್ಷರ ತೀರ್ಪು:–

ವಿಷಯ: ರಾಜ್ಯದಲ್ಲಿ ರಸಗೊಬ್ಬರ ಕೊರತೆ ಬಗ್ಗೆ.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇನ್ನಿತರ ಗೌರವಾನ್ವಿತ ಸದಸ್ಯರು ಇವತ್ತು ರಾಜ್ಯದಲ್ಲಿರುವ ರಸಗೊಬ್ಬರ ಕೊರತೆಯ ಬಗ್ಗೆ ನಿಲುವಳಿ ಸೂಚನೆಯ ಮುಖಾಂತರ ಇಲ್ಲಿ ಪ್ರಸ್ತಾಪವನ್ನು ಮಾಡಿದ್ದಾರೆ. ಈಗಾಗಲೇ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ತಮ್ಮ ಚರ್ಚೆಗೆ ಉತ್ತರವನ್ನು ಕೊಡುವಂಥ ಸಂದರ್ಭದಲ್ಲಿ, ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಬೇಡಿಕೆಯ ಮೇಲೆ ಚರ್ಚೆ ಇವತ್ತು ಇದೆ ಎನ್ನುವುದನ್ನು ನಮ್ಮ ಗಮನಕ್ಕೆ ತಂದಿದ್ದಾರೆ. ಆ ವಿಷಯಕ್ಕೆ ಸಮಬಂಧಪಟ್ಟಂತೆ ಚರ್ಚೆ ಮಾಡುವ ಸಂದರ್ಭದಲ್ಲಿ ಈ ವಿಷಯವನ್ನೂ ಪ್ರಸ್ತಾಪ ಮಾಡಬಹುದು ಎನ್ನುವ ಅಭಿಪ್ರಾಯವನ್ನು ಮಾನ್ಯ ಕಾನೂನು ಸಚಿವರು ವ್ಯಕ್ತಪಡಿಸಿದ್ದಾರೆ. ಅವರ ಅಭಿಪ್ರಾಯವನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ. ಹಿಂದೆ ಇಂಥ ಪರಿಸ್ಥಿತಿಗಳು ಬಂದಾಗ ಹಿಂದಿನ ಸಭಾಧ್ಯಕ್ಷರು